ಐಕ್ಯರಂಗ

ಸಂಪುಟ 21 ಸಂಚಿಕೆ 48

ನವಂಬರ್ 23-29, 1998 ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಎಚ್ಚರಿಕೆಯ ಗಂಟೆ ಬಾರಿಸಿದ ಶ್ರಮಜೀವಿಗಳ ಬೃಹತ್ ರ್‍ಯಾಲಿ

ಡಿಸೆಂಬರ್ 11 ರ ಮಹಾಕಾರ್ಯಾಚರಣೆಗೆ ಸರ್ವಸಿದ್ಧತೆ

"ಕೇಂದ್ರ ಸರ್ಕಾರಕ್ಕೆ ಗಂಟೆ ಬಾರಿಸಲಿಕ್ಕೆ ನಾವೆಲ್ಲಾ ಬಂದಿದ್ದೇವೆ. ಈ ಗಂಟೆಯನ್ನು ಜೋರು ಜೋರಾಗಿ ಬಾರಿಸಬೇಕು, ಡಿಸೆಂಬರ್ 11 ರಂದು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡುವುದಿಲ್ಲ, ರೈಲು ಬಿಡುವುದಿಲ್ಲ, ಕಾರ್ಖಾನೆಗಳು ನಡೆಯುವುದಿಲ್ಲ, ಕಚೇರಿಗಳು ತೆರೆಯುವುದಿಲ್ಲ, ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವುದಿಲ್ಲ, ಶಾಲಾ ಕಾಲೇಜುಗಳು ನಡೆಯುವುದಿಲ್ಲ ಎಲ್ಲವೂ ಸ್ತಬ್ಧಗೊಳ್ಳುತ್ತವೆ" - ನವೆಂಬರ್ ೧೬ ರಂದು ಬೆಂಗಳೂರಿನ ಮಲ್ಲೇಶ್ವರಂ ಮೈದಾನದಲ್ಲಿ ನೆರೆದ ಅಪಾರ ಜನಸ್ತೋಮದ ದೃಢ ನಿರ್ಧಾರಕ್ಕೆ ಕಾಂ. ಎಸ್.ಸೂರ್ಯನಾರಾಯಣ ರಾವ್ ದನಿ ನೀಡುತ್ತಾ ಸಾರಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳು ಸಂದು ಹೋದರೂ ಗಾಂಧೀಜಿಯ ಕನಸು ಕನಸಾಗೇ ಉಳಿದಿದೆ. ಏಕೆಂದರೆ ಕೇಂದ್ರದಲ್ಲಿ ಬಂದ ಸರಕಾರಗಳೆಲ್ಲವೂ ಬಂಡವಾಳಶಾಹಿಗಳ, ಇತರ ಆಳುವ ವರ್ಗಗಳ ಜನಗಳ ಹಿತಾಸಕ್ತಿ ಕಾಪಾಡುವ ಸರಕಾರಗಳಾಗಿವೆ. ಕೋಟ್ಯಾಂತರ ಶ್ರಮಜೀವಿ ಜನಸಮೂಹಗಳ ಹಿತ ಕಾಪಾಡುವ ಸರಕಾರಗಳಾಗಿರಲಿಲ್ಲ, ಈಗಲೂ ಆಗಿಲ್ಲ ಎಂದು ಕಾಂ. ಸೂರಿಯವರು ವಿಶ್ವಬ್ಯಾಂಕ್-ಐಎಂಎಫ್ ಹೇರಿದ ನೀತಿಗಳು ಜನಗಳನ್ನು ಸಂಕಷ್ಟಗಳ ಕೂಪಕ್ಕೆ ತಳ್ಳಲಾರಂಭಿಸಿದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಹುಟ್ಟಿಕೊಂಡ ಕಾರಣವನ್ನು ವಿವರಿಸಿದರು.

ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಹೇಳುತ್ತಾ ಹೊಟ್ಟೆ ನೋವು ವಾಜಪೇಯಿಯವರಿಗೆ ಬಂದಿಲ್ಲ, ದೇವೇಗೌಡ-ಪಟೇಲರಿಗೆ ಬಂದಿಲ್ಲ, ಕೋಟ್ಯಾಂತರ ಬಡ ಜನರಿಗೆ ಬಂದಿದೆ. ಆದಕ್ಕೇ ಅವರು ಹೋರಾಟಕ್ಕಿಳಿದ್ದಿದ್ದಾರೆ ಎಂದರು. ದೊಡ್ಡ ಬಂಡವಾಳಶಾಹಿಗಳು ತೀರಿಸದ 45 ಸಾವಿರ ಕೋಟಿ ರೂ. ಬ್ಯಾಂಕ್ ಸಾಲಗಳನ್ನು ವಸೂಲಿ ಮಾಡಲಾರದ ವಾಜಪೇಯಿ ಸರಕಾರ ಬಡ ಜನರು ಊಟ ಕೇಳಿದರೆ ಸರಸ್ವತಿ ವಂದನೆ, ಸಂಸ್ಕೃತ, ವೇದ-ಉಪನಿಷತ್ತು ಎನ್ನುತ್ತದೆ, ಇಲ್ಲಿ ಉಪವಾಸವಿದ್ದರೆ ಅಲ್ಲಿ ಸ್ವರ್ಗ ಎನ್ನುತ್ತದೆ. ನಾವು ಇಲ್ಲಿ ಕಾರ್ಖಾನೆಗಳಲ್ಲಿ, ಹೊಲಗಳಲ್ಲಿ ದುಡಿಯುತ್ತಿರುವ ರಾಮ, ಕೃಷ್ಣ, ಲಕ್ಷ್ಮಿ, ಸರಸ್ವತಿಯರ ಹೋರಾಟ ಮಾಡುತ್ತಿದ್ದೇವೆ ಎಂದು ಬಿಜೆಪಿ ನೇತೃತ್ವದ ಸರ್ಕಾರದ ಅಮಾನವೀಯ ಗೋಸುಂಬೆತನವನ್ನು ಬಯಲಿಗೆಳೆಯುತ್ತಾ ಓಟು ನಮ್ಮದು, ಅಧಿಕಾರ ಅವರದ್ದು ಎಂಬ ಈ ಸ್ಥಿತಿಯನ್ನು ಬದಲಿಸಬೇಕು ಎಂದರು. ಇದು ಸಾಧ್ಯ ಎಂದು ಇತ್ತೀಚೆಗೆ ಇಂಡೋನೇಶ್ಯಾದ ಜನ ತೋರಿಸಿ ಕೊಟ್ಟಿದ್ದಾರೆ. ನಾವೂ ಮಾಡಿ ತೋರಿಸಲು ಸಾಧ್ಯ. ಡಿಸೆಂಬರ್ 11ರಂದು ಎಚ್ಚರಿಕೆಯ ಗಂಟೆಯನ್ನು ಜೋರು ಜೋರಾಗಿ ಬಾರಿಸಬೇಕು ಎಂದು ಕಾಂ. ಸೂರಿ ಕರೆ ನೀಡಿದರು.

ಪ್ರಧಾನಿಗಳು ಜವಾಬ್ದಾರಿಯಿಂದ ಮಾತನಾಡಬೇಕು

ಪ್ರಧಾನ ಮಂತ್ರಿಗಳ ಸ್ಥಾನದಲ್ಲಿ ಇರುವವರು ಅತ್ಯಂತ ಜವಾಬ್ದಾರಿಯಿಂದ ಮಾತನಾಡಬೇಕು. ಆದರೆ ನಮ್ಮ ಈಗಿನ ಪ್ರಧಾನಿಗಳು ತದ್ವಿರುದ್ಧವಾಗಿ ವರ್ತಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿಯವರು ಉದಾಹರಣೆಗಳ ಸಹಿತ ವಿವರಿಸಿದರು. ಅಗಾಧ ಬೆಲೆಯೇರಿಕೆ, ಹಣ ದುಬ್ಬರಕ್ಕೆ ಕಾಂಗ್ರೆಸ್ ಕಾರಣ ಎನ್ನುತ್ತಿದ್ದಾರೆ. ನಿಜ, ಆ ಪಕ್ಷ 45 ವರ್ಷಗಳ ಕಾಲ ಅನುಸರಿಸಿದ ದಿವಾಳಿಕೋರ ನೀತಿಗಳಿಂದಾಗಿ ನಿಮಗೆ ಅಧಿಕಾರ ದೊರೆತಿದೆ. ಆದರೆ ನೀವೇನು ಕ್ರಮ ಕೈಗೊಂಡಿದ್ದೀರಿ? ಎಂದು ಖಾರವಾಗಿ ಪ್ರಶ್ನಿಸಿದರು. ನರಸಿಂಹ ರಾಯರಿಗಿಂತ ಹೆಚ್ಚಿನ ರಭಸದಿಂದ ಅವೇ ನೀತಿಗಳನ್ನು ಜಾರಿಗೆ ತರುತ್ತಿದ್ದೀರಿ ಎಂದು ಆಪಾದಿಸಿದರು. ಅಮೆರಿಕಾ 200 ಕಂಪನಿಗಳ ಮೇಲೆ ಹಾಕಿದ ನಿರ್ಬಂಧವನ್ನು ಪ್ರಶ್ನಿಸಿ ವಿಶ್ವ ವಾಪಾರ ಸಂಸ್ಥೆಗೆ ದೂರು ಕೊಡುವುದಾಗಿ ಹೇಳುತ್ತಿದ್ದೀರಿ, ಇದರ ಅರ್ಥವೇನು? ಇಂತಹ ಪರಿಸ್ಥಿತಿ ನಿರ್ಮಾಣ ಮಾಡಿದವರು ಯಾರು? ಫೆಬ್ರವರಿ ತಿಂಗಳವರೆಗೆ ಲೋಕಸಭೆಯಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದವರು ವಾಜಪೇಯಿ. ಅದುವರೆಗೆ ದೇಶಕ್ಕೆ ಇಲ್ಲದ ಗಂಡಾಂತರ ಮಾರ್ಚ್ ತಿಂಗಳಲ್ಲಿ ಇದ್ದಕ್ಕಿದ್ದಂತೆ ಎಲ್ಲಿಂದ ಬಂತು? ಅಣು ಸ್ಫೋಟ ನಡೆಸುವ ಅಗತ್ಯ ಏಕೆ ಬಂತು? ಇದರ ಹಿಂದಿರುವ ರಾಜಕೀಯ ಏನು ಎಂದು ಪ್ರಶ್ನಿಸಿದ ಶ್ರೀರಾಮರೆಡ್ಡಿಯವರೇ ಅದಕ್ಕೆ ಉತ್ತರ ನೀಡಿದರು - ಹಲವು ಪಕ್ಷಗಳನ್ನು ಜೊತೆ ಸೇರಿಸಿಕೊಂಡು ಸರ್ಕಾರ ನಡೆಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಅದು ಸರ್ಕಾರ ನಡೆಸುತ್ತಿಲ್ಲ. ತಾನೇ ಹಿಂದೆ ವಿರೋಧಿಸಿದ್ದ ರಾಜಕೀಯ ದಳ್ಳಾಳಿತನ ನಡೆಸುತ್ತಿದೆ ಎಂದು ಅವರು ಮೂದಲಿಸಿದರು. ಇದನ್ನು ಮುಚ್ಚಿಕೊಳ್ಳಲು ಅನಗತ್ಯ ಅಣುಸ್ಫೋಟ ನಡೆಸಿ ದೇಶವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ ಎಂದರು.

ಕಮ್ಯುನಿಸ್ಟರ ಬಗ್ಗೆ ಪ್ರಧಾನಿಗಳ ಇತ್ತೀಚಿನ ಹೇಳಿಕೆಯನ್ನು ಖಂಡಿಸುತ್ತಾ ಸ್ವಾತಂತ್ರ್ಯ ಹೋರಾಟದಲ್ಲಿ ಕಿಂಚಿತ್ತೂ ಪಾತ್ರ ವಹಿಸದವರಿಂದ, ಬ್ರಿಟಿಶರಿಗೆ

ಪುಟ 8ಕ್ಕೆ

ಹತಾಶ ಬಿಜೆಪಿ ಮುಖಂಡರ ಅಪಲಾಪಗಳು

ಕಳೆದ ಎಂಟು ತಿಂಗಳಲ್ಲಿ ತಾವು ನೀಡಿದ ಆಡಳಿತದ ಅಪ್ಪಟ ಅಸಮರ್ಥತೆ ಯಿಂದ ಜನಗಳ ಬೆಂಬಲವನ್ನು ತ್ವರಿತವಾಗಿ ಕಳಕೊಳ್ಳುತ್ತಿರುವುದನ್ನು ಕಂಡು ಬಿಜೆಪಿ ಮುಖಂಡರು ಎಷ್ಟೊಂದು ಹತಾಶರಾಗಿದ್ದಾರೆಂದರೆ ಎಲ್ಲೆಲ್ಲೂ ಅವರಿಗೆ ತಮ್ಮ ವಿರುದ್ಧ ಪಿತೂರಿಗಳೇ ಕಾಣಿಸುತ್ತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ಬಿಜೆಪಿ ಮುಖಂಡರು ಈಗ ಕಮ್ಯುನಿಸ್ಟರ ವಿರುದ್ಧ, ಮುಖ್ಯವಾಗಿ ಸಿಪಿಐ(ಎಂ) ವಿರುದ್ಧ ಹರಿಯಬಿಟ್ಟಿರುವ ವಿಷಪೂರ್ಣ ವಾಗ್ದಾಳಿಗಳಿಗೆ ಪ್ರತಿಕ್ರಿಯಿಸುತ್ತಾ ಹೇಳಿದ್ದಾರೆ. ಭಯಗ್ರಸ್ತ ಬಿಜೆಪಿ ಮುಖಂಡರು ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ಮತದಾರರನ್ನು ತಪ್ಪು ದಾರಿಗೆಳೆಯಲು ನಡೆಸುತ್ತಿರುವ ತಂತ್ರ ಇದು ಎಂದು ಅವರು ಹೇಳಿದ್ದಾರೆ.

ಈ ಮುಖಂಡರುಗಳು ಸಿಪಿಐ(ಎಂ) ಮೇಲೆ ಈಗ ಪ್ರತಿದಿನವೆಂಬಂತೆ ಸತ್ಯ ದೂರವಾದ ಆಪಾದನೆಗಳನ್ನು ಮಾಡುತ್ತಿದ್ದಾರೆ. ಇವು ಸುಳ್ಳೆಂದು ತಿಳಿಯದಷ್ಟು ಮೊದ್ದುಗಳೇನಲ್ಲ ಈ ರಾಜಕಾರಣಿಗಳು. ಇವರು ಬೇಕೆಂದೇ ಈ ಕಿಡಿಗೇಡಿತನಗಳಿಗೆ ಇಳಿದಿದ್ದಾರೆ. ದುರುದ್ದೇಶದಿಂದಲೇ ಸಿಪಿಐ(ಎಂ) ನ ನಿಲುವುಗಳನ್ನು ವಿಕೃತಿಗೊಳಿಸುತ್ತಿದ್ದಾರೆ ಎಂದು ಸೀತಾರಾಂ ಯೆಚೂರಿ ಯವರು ಬಲವಾಗಿ ಟೀಕಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುವರವರು 30ನೇ ನೆಹರೂ ಸ್ಮಾರಕ ಭಾಷಣ ಮಾಡಿರುವುದು ಹಿರಿಯ ಬಿಜೆಪಿ ಮುಖಂಡರಿಗೆ ಎಡಪಕ್ಷಗಳು ಮತ್ತು ಕಾಂಗ್ರೆಸ್ಸಿನ ನಡುವಿನ 'ಅಪವಿತ್ರ ಮೈತ್ರಿ'ಯಾಗಿ ಕಂಡಿದೆ. ಈ ಸ್ಮಾರಕ ಭಾಷಣ ಮಾಡುವ ಗೌರವವನ್ನು ಕೇವಲ ಪ್ರತಿಷ್ಠಿತರಿಗಷ್ಟೇ ಕೊಡಲಾಗುತ್ತದೆ. ಸಿಪಿಐ(ಎಂ) ಈ ಆಹ್ವಾನವನ್ನು ಸ್ವೀಕರಿಸಲು ನಿರ್ಧರಿಸಿತು. ಅಲ್ಲದೆ ಈ ಭಾಷಣ ಹೊಸ ಶತಮಾನದ ಹೊಸ್ತಿಲಲ್ಲಿ ಭಾರತದ ಮುಂದಿರುವ ಸವಾಲುಗಳ ಬಗ್ಗೆ ಕಮ್ಯುನಿಸ್ಟ್ ಕಣ್ನೋಟವನ್ನು ದೇಶದ ಮುಂದಿಡಲು ಒಂದು ವೇದಿಕೆ ಒದಗಿಸಿತ್ತು. ಇದರಲ್ಲಿ ಬಿಜೆಪಿ ಮುಖಂಡರು - ಮುಖ್ಯವಾಗಿ ಪ್ರಧಾನಿ ವಾಜಪೇಯಿ ಮತ್ತು ಗೃಹಮಂತ್ರಿ ಅಡ್ವಾಣಿಯವರಿಗೆ ಪಿತೂರಿ ಕಂಡಿದೆ. ಇದು 'ಅಪವಿತ್ರ ಮೈತ್ರಿ' ಯೆಂದು ಚಿತ್ರಿಸುವುದು ಅವರ ಒಂದು ಯೋಜಿತ ಕಾರ್ಯತಂತ್ರ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ಹೋರಾಟದ ಸಾಗರದಲ್ಲಿ ಅಲೆ ಅಲೆಯಾಗಿ ಬಂದರು.....

ಅವರು ಬೀದರಿನಿಂದ ಬಂದರು, ಗುಲ್ಬರ್ಗದಿಂದ ಬಂದರು, ಮೈಸೂರಿನಿಂದ ಬಂದರು, ಕೋಲಾರದಿಂದ ಬಂದರು, ಕಾರವಾರದಿಂದ ಬಂದರು...... ರಾಜ್ಯದ ಮೂಲೆಮೂಲೆಗಳಿಂದಲೂ ಬಂದರು - ಕರ್ನಾಟಕದ ಕೋಟ್ಯಾಂತರ ಶ್ರಮಜೀವಿಗಳನ್ನು ಪ್ರತಿನಿಧಿಸಿದ ಈ ಇಪ್ಪತ್ತು ಸಾವಿರ ಮಂದಿ, ಅವರ ದುಗುಡ-ದುಮ್ಮಾನಗಳನ್ನು ಹೊತ್ತು, ಜತೆಗೆ ಇವನ್ನೆಲ್ಲಾ ಪರಿಹರಿಸಿ ಮುನ್ನಡೆಯುವ ಹೋರಾಟದ ಕೆಚ್ಚನ್ನು ಹೊತ್ತು ಬಂದರು. ರೈತರ, ಕಾರ್ಮಿಕರ, ಕೃಷಿಕೂಲಿಕಾರರ, ನೌಕರರ, ಅಂಗನವಾಡಿ ಕಾರ್ಯಕರ್ತೆಯರ, ವಿದ್ಯಾರ್ಥಿ, ಯುವಜನರ ಸಂಘಟನೆಗಳ ನೂರಾರು ಬ್ಯಾನರುಗಳ ಪ್ರವಾಹವೇ ಬೆಂಗಳೂರಿನ ರಸ್ತೆಗಳಲ್ಲಿ ಸಾಗಿತು - ಆಳರಸರ ವಂಚನೆಗಳಿಗೆ ಧಿಕ್ಕಾರ ಕೂಗುತ್ತಾ, ಹೋರಾಟದ-ಐಕ್ಯ ಹೋರಾಟದ ಘೋಷಣೆಗಳನ್ನು ಮೊಳಗಿಸುತ್ತಾ.

ಪುಟ 5 ನೋಡಿ

ಡಿಸೆಂಬರ್ 11 ಪರ್ಯಾಯ ನೀತಿಗಳಿಗಾಗಿ ಹೋರಾಟ 5

ಒಕ್ಕಲಿಗ ಒಕ್ಕಿದರೂ ಒಡಲಿಗಿಲ್ಲ - ನಿತ್ಯಾನಂದ ಸ್ವಾಮಿ 4

ಬಿಜೆಪಿ ಶಾಸಕರಿಗೆ ಸಿಪಿಐ(ಎಂ) ಕಾರ್ಯದರ್ಶಿಗಳ ಪತ್ರ 2

ಬಿಜೆಪಿ ಶಾಸಕರಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳ ಪತ್ರ

"ಸತ್ಯಕ್ಕೆ ಇಂತಹ ಅಪಚಾರ ಬೇಡ"

ಬೆಂಗಳೂರಿನ ರಾಜಾಜಿನಗರ ಕ್ಷೇತ್ರದ ಶಾಸಕ ಸುರೇಶ್‌ಕುಮಾರ್‌ರವರು ನವೆಂಬರ್ 10 ರಂದು ಬೆಂಗಳೂರಿನಲ್ಲಿ ನಡೆದ ಕ್ರಿಶ್ಚಿಯನ್ನರ ರ್‍ಯಾಲಿಯ ಬಗ್ಗೆ ಬೆಂಗಳೂರಿನ ಆರ್ಚ್‌ಬಿಷಪ್ ರೆವರೆಂಡ್ ಇಗ್ನೇಷಿಯಸ್ ಪಿಂಟೋರವರಿಗೆ ಒಂದು ಪತ್ರ ಬರೆದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ವರದಿಗಳನ್ನು ಉದ್ಧರಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್‌ರವರು ನವೆಂಬರ್ 20 ರಂದು ಶ್ರೀಯುತ ಸುರೇಶ್‌ಕುಮಾರ್‌ರವರಿಗೆ ಬರೆದ ಪತ್ರದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

ಮಾನ್ಯರೆ,

ದೇಶಾದ್ಯಂತ ಕ್ರಿಶ್ಚಿಯನ್ನರ ಮೇಲೆ ನಡೆಯುತ್ತಿರುವ ಧಾಳಿ, ದೌರ್ಜನ್ಯಗಳನ್ನು ಪ್ರತಿಭಟಿಸಲು ನ.10 ರಂದು ಬೆಂಗಳೂರಿನಲ್ಲಿ ನಡೆದ ರ್‍ಯಾಲಿಯ ವಿರುದ್ಧ ಹಾಗೂ ಕ್ರೈಸ್ತರು ತಮ್ಮ ಮೇಲೆರಗುತ್ತಿರುವ ಧಾಳಿಗಳ ಬಗ್ಗೆ ವ್ಯಕ್ತಪಡಿಸಿದ ಭಾವನೆಗಳ ಬಗ್ಗೆ ಬೆಂಗಳೂರಿನ ಆರ್ಚ್‌ಬಿಷಪ್ ರೆವರೆಂಡ್ ಇಗ್ನೇಷಿಯಸ್ ಪಿಂಟೋರವರಿಗೆ ನೀವು ಬರೆದ ಪತ್ರದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯನ್ನು ನೋಡಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ಮುಖ್ಯವಾಗಿ ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳಾದ ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ, ಮಹಾರಾಷ್ಟ್ರ ಇದರ ಜೊತೆಗೆ ಮಧ್ಯಪ್ರದೇಶ, ಪಂಜಾಬ್‌ಗಳಲ್ಲಿ ಕ್ರೈಸ್ತ ಧರ್ಮೀಯರ ಮೇಲೆ, ಕ್ರೈಸ್ತ ಧಾರ್ಮಿಕ ಸಂಸ್ಥೆಗಳ ಮೇಲೆ ವ್ಯಾಪಕ ಹಾಗೂ ಅಮಾನುಷ ಹಲ್ಲೆಗಳನ್ನು ನಡೆಸಿರುವ ಬಗ್ಗೆ, ಆ ವಿಷಯದಲ್ಲಿ ಕ್ರೈಸ್ತರಿಗೆ ಉಂಟಾಗಿರುವ ಆತಂಕ, ಭಯಗಳ ಬಗ್ಗೆ ಸಹಾನುಭೂತಿಯನ್ನು ತಾವು ವ್ಯಕ್ತಪಡಿಸದಿರುವುದು ಖೇದಕರವಾದ ಸಂಗತಿ.

ವಿಶ್ವ ಹಿಂದು ಪರಿಷತ್‌ನ ವ್ಯಾಪಕ ಜಾಲವಿರುವ ಈ ರಾಜ್ಯಗಳಲ್ಲಿ ಬೈಬಲ್ ಪ್ರತಿಗಳನ್ನು ಸುಡುವುದು, ಚರ್ಚ್‌ಗಳನ್ನು ಧ್ವಂಸ ಮಾಡುವುದು, ಕ್ರಿಶ್ಚಿಯನ್ ಸ್ಮಶಾನಗಳನ್ನು ಅಪವಿತ್ರಗೊಳಿಸುವುದು, ಪ್ರಾರ್ಥನಾ ಸಭೆಗಳ ಮೇಲೆ ಧಾಳಿ ಮಾಡಿ ಅಮಾನುಷ ಹಲ್ಲೆ ಮಾಡುವುದು ವ್ಯಾಪಕವಾಗಿ ನಡೆದಿದೆ. ಇಂತಹ ಅತ್ಯಾಚಾರದ ಉತ್ತುಂಗ ಶಿಖರವಾಗಿ ಮಧ್ಯಪ್ರದೇಶದ ಝಬುವಾ ಜಿಲ್ಲೆಯಲ್ಲಿ ನಡೆದಿರುವ ಕ್ರೈಸ್ತ ಸನ್ಯಾಸಿನಿಯರ ಮಾನಭಂಗ ಘಟನೆ. ಇಂತಹ ಘಟನೆಯನ್ನು ವಿಶ್ವಹಿಂದು ಪರಿಷತ್ ಸಮರ್ಥಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿ. ನಿಜ ಘಟನೆಗಳನ್ನು ತಿರುಚಿ, ವಿಕೃತಗೊಳಿಸುವ ಯತ್ನಗಳು ಹಲವಾರು ಎಲ್ಲರೆದುರಿಗಿವೆ.

ಇಂತಹ ಘಟನೆಗಳು ವ್ಯಾಪಕವಾಗಿ ನಡೆದಿರುವಾಗ, ಸಂವಿಧಾನದತ್ತ ಧಾರ್ಮಿಕ ಸ್ವಾತಂತ್ರ್ಯದ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಉಲ್ಲಂಘನೆಯಾಗಿರುವಾಗ ಕೇಂದ್ರ ಸರ್ಕಾರ ಹಾಗೂ ಅದರ ಗೃಹ ಮಂತ್ರಿಯವರಿಂದ ಈ ವ್ಯಾಪಕ ಹಿಂಸಾಚಾರವನ್ನು ಖಂಡಿಸುವ ಯಾವುದೇ ಅಧಿಕೃತ ಹೇಳಿಕೆಗಳಿಲ್ಲ. ಅಥವಾ ಈ ಧಾಳಿಗಳಿಂದ ಅಲ್ಪಸಂಖ್ಯಾತ ಕ್ರೈಸ್ತರನ್ನು ರಕ್ಷಿಸುವ, ಅವರಿಗೆ ಧೈರ್ಯ ನೀಡುವ ಯಾವುದೇ ಕ್ರಮ ಕೈಗೊಂಡಿಲ್ಲ. ಅದಕ್ಕೆ ಬದಲಾಗಿ ಬಿಜೆಪಿ ಪಕ್ಷದ ನಾಯಕರಿಂದ ಇಂತಹ ಯಾವುದು ನಡೆದೇ ಇಲ್ಲ ಎಂದು ತಳ್ಳಿ ಹಾಕುವ, ಕುಕೃತ್ಯಗಳನ್ನು ಮುಚ್ಚಿಹಾಕುವ ಕೆಲಸಗಳು ನಡೆದಿವೆ.

"ಜೀಸಸ್ ಕ್ರಿಸ್ತನ ಅನುಯಾಯಿಗಳು ನಡೆಸಿದ ರ್‍ಯಾಲಿಯಲ್ಲಿ ಸತ್ಯ ಅಪಘಾತಕ್ಕೀಡಾಗಬಾರದಿತ್ತು" ಎಂದಿರುವ ನೀವು ಈ ಅಸಂಖ್ಯಾತ ಘಟನೆಗಳ ಬಗ್ಗೆ ಅದನ್ನು ನಿಮ್ಮ ಪಕ್ಷದ ನಾಯಕರು ಸಮರ್ಥಿಸಿಕೊಂಡಿರುವ ಬಗ್ಗೆ ಒಂದು ಸೊಲ್ಲೆತ್ತಿಲ್ಲ ಏಕೆ?

ಕರ್ನಾಟಕದ ಹಲವು ಭಾಗಗಳಲ್ಲಿ-ಬಳ್ಳಾರಿ, ಧಾರವಾಡ, ಬೆಂಗಳೂರು ಗ್ರಾಮಾಂತರ, ಮಂಗಳೂರು ಮೊದಲಾದ ಕಡೆಗಳಲ್ಲಿ ವಿಶ್ವಹಿಂದು ಪರಿಷತ್ ಹಾಗೂ/ಅಥವಾ ಭಜರಂಗ ದಳದವರು ಕ್ರಿಶ್ಚಿಯನ್ ಸಂಸ್ಥೆಗಳ ಮುಂದೆ ಮೆರವಣಿಗೆಗಳನ್ನು ನಡೆಸಿ ಘೋಷಣೆಗಳನ್ನು ಕೂಗಿ ಕ್ರೈಸ್ತರನ್ನು ಬೆದರಿಸಿರುವುದು ನಿಮ್ಮ ಕಿವಿಗೆ ಬಿದ್ದಿಲ್ಲವೇ? ಅಥವಾ ಇದೆಲ್ಲವೂ ನಿಮ್ಮ ಪಕ್ಷದ ಭಾರತ ಕೇವಲ ಹಿಂದೂಗಳ ನಾಡು ಬೇರೆಯವರೆಲ್ಲರೂ ಪರಕೀಯರು, ಅವರಿಗೆ ಯಾವುದೇ ಸ್ಥಾನಮಾನ ಇಲ್ಲ ಎಂಬ ಹಿಂದುತ್ವ ಸಿದ್ಧಾಂತದ ಪ್ರಕಾರ ಯೋಜಿತವಾಗಿ ನಡೆದಿರುವುದರಿಂದ ನೀವೂ ಇದರಲ್ಲಿ ಭಾಗಿಗಳೇ?

ಇನ್ನು ನೀವು "ಯಾವುದೇ ಮಹಿಳೆಯ ಮಾನಭಂಗ ಒಂದು ಹೀನ ಅಪರಾಧ. ಅದು ಅಲ್ಪಸಂಖ್ಯಾತ ಹಾಗೂ ಬಹುಸಂಖ್ಯಾತರ ವೈರುಧ್ಯದ ಪ್ರಶ್ನೆಯಲ್ಲ", "ಅಸಹಾಯಕ ಕ್ರೈಸ್ತ ಸನ್ಯಾಸಿನಿಯರು ಅವರು ಕ್ರೈಸ್ತರಾಗಿದ್ದರಿಂದಲೇ ಅವರ ಮಾನಭಂಗವಾಯಿತು ಎಂಬ ಭಾವನೆಯನ್ನು ಹುಟ್ಟಿಸಲು ಪ್ರಯತ್ನಿಸಿದ್ದೀರಿ", "ಒಂದು ಅಪರಾಧಕ್ಕೆ ರಾಜಕೀಯ ಹಾಗೂ ಕೋಮುವಾದಿ ಬಣ್ಣ ಕೊಡಬೇಕೆ?" "ಅತ್ಯಾಚಾರಿಗಳು ಯಾವ ಧರ್ಮಕ್ಕೂ ಸೇರಿದವರಲ್ಲ. ಯಾವ ಧರ್ಮವೂ ಅವರನ್ನು ತಮ್ಮವರೆನ್ನಲು ಸಾಧ್ಯವಿಲ್ಲ" ಎಂಬ ಆಣಿಮುತ್ತುಗಳನ್ನು ತಮ್ಮ ಪತ್ರದಲ್ಲಿ ಉದುರಿಸಿದ್ದೀರಿ.

ಈ ಎಲ್ಲಾ ಮಾತುಗಳಲ್ಲಿ ನಿಮ್ಮ ಪಕ್ಷದ ನಾಯಕರಿಗೆ ನಂಬಿಕೆಯಿದ್ದಿದ್ದರೆ ಈಗ ಹತ್ತಾರು ವರ್ಷಗಳಿಂದ ನಮ್ಮ ದೇಶದಲ್ಲಿ ನಡೆದ ನರಮೇಧ, ಸಾವಿರಾರು ಜನರ ಕಗ್ಗೊಲೆ, ಅಸಂಖ್ಯಾತ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಲೇ ಇರುತ್ತಿರಲಿಲ್ಲ. ಅಂತಹ ಹೀನ ಅಪರಾಧವೆಸಗಿದವರನ್ನು ಹಿಡಿದು ಶಿಕ್ಷೆಗೊಳಪಡಿಸಲಾಗುತ್ತಿತ್ತು. ಆದರೆ ನೀವು ಸೇರಿರುವ ಪಕ್ಷ ಇಂತಹ ಎಷ್ಟು ಸಾವಿರ ಘಟನೆಗಳ ಹಿಂದಿದೆ ಎಂಬುದು ಭಾರತ ದೇಶದ ಜನತೆಗೆ ಗೊತ್ತಿದೆ. ಶ್ರೀ ಕೃಷ್ಣ ಆಯೋಗ ಏನು ಹೇಳಿದೆ? ಅದರ ವರದಿಯ ಗತಿ ಏನಾಯಿತು?

ಕೊನೆಗೆ ಬಿಜೆಪಿ ಇಂತಹ ಅಮಾನವೀಯ ಅಪರಾಧಗಳ ವಿರುದ್ಧ ಹೋರಾಟದಲ್ಲಿ ಸದಾ ಮುಂದಿರುತ್ತದೆ ಎಂದಿದ್ದೀರಿ. ಸತ್ಯಕ್ಕೆ ಇಂತಹ ಅಪಚಾರವನ್ನು ನೀವು ಎಸಗಬಾರದಿತ್ತು.

ಕರ್ನಾಟಕದ ಹಲವೆಡೆ ಬಿಜೆಪಿ ಕಾರ್ಯಕರ್ತರೂ ಸೇರಿದಂತೆ ವಿಶ್ವ ಹಿಂದುಪರಿಷತ್ ಮುಂತಾದ ಸಂಸ್ಥೆಗಳು ಕ್ರೈಸ್ತರನ್ನು ಅವರ ಸಂಸ್ಥೆಗಳನ್ನು ಬೆದರಿಸುತ್ತಿರುವುದರ ಬಗ್ಗೆ ಆಗಲೇ ಉಲ್ಲೇಖ ಮಾಡಲಾಗಿದೆ. ಅಲ್ಪಸಂಖ್ಯಾತರ ಮೇಲೆ, ಅವರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಎಸಗುವ ಧಾಳಿಗಳನ್ನು ಎದುರಿಸುವಲ್ಲಿ ಕ್ರೈಸ್ತ ಜನತೆಯನ್ನು ಸಿಪಿಐ(ಎಂ) ಬೆಂಬಲಿಸುತ್ತದೆ. ನವೆಂಬರ್ 10 ರಂದು ಅವರು ನಡೆಸಿದ ಬೃಹತ್ ಪ್ರತಿಭಟನೆ ಅವರ ಭಾವನೆಗಳ ಆಳವನ್ನು, ಅವರ ಆತಂಕವನ್ನು ವ್ಯಕ್ತಪಡಿಸಿದೆ. ದೇಶದ ಸಮಗ್ರತೆ, ಕೋಮುಸೌಹಾರ್ದತೆ ರಕ್ಷಿಸಲು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅವರ ಬೆಂಬಲಕ್ಕೆ ಅಣಿನೆರೆಸುವುದಕ್ಕೆ ಸಿಪಿಐ(ಎಂ) ಶ್ರಮಿಸುತ್ತದೆ ಎಂದು ತಮಗೆ ಹೇಳಬಯಸುತ್ತೇನೆ. ನಿಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಂಡು ಅವರ ರಕ್ಷಣೆಗೆ ನಿಲ್ಲುತ್ತೀರೆಂದು ಆಶಿಸಬಹುದೇ?

ಇಂತಿ ತಮ್ಮ ವಿಶ್ವಾಸಿ

ಎಸ್.ಸೂರ್ಯನಾರಾಯಣ ರಾವ್

ಆಕಾಶದಲ್ಲೆರಡು ತಾರೆಗಳ ಕಂಡಿರಾ?



ಭಾರತದ ಆರ್ಥಿಕದ ಆಕಾಶದಲ್ಲಿ ಎರಡು ತಾರೆಗಳಿವೆಯೆಂದು ಬಂಡವಾಳಿಗರು ಕಂಡಿದ್ದಾರೆ ನಿಮಗೆ ಕಂಡಿದೆಯೆ? ಕಂಪನಿಗಳಲ್ಲೆಲ್ಲ ಎರಡು ತರಹದ ಕಂಪನಿಗಳು ಲಾಭ ಕಾಣುತ್ತವೆಯಂತೆ ಒಂದು ಔಷದಗಳ ಕಂಪನಿಗಳು, ಎರಡನೇಯದು ಮಾಹಿತಿ ತಂತ್ರಜ್ಞಾನ ಅಂದರೆ ಕಪ್ಯೂಟರ್ ಮತ್ತಿತ್ತರ ಇಲೆಕ್ಟ್ರಾನಿಕ್ ಉದ್ಯಮದಲ್ಲಿನ ಕಂಪನಿಗಳು.

ಈ ಎರಡು ತರಹದ ಕಂಪನಿಗಳನ್ನು ಒಟ್ಟಾರೆಯಾಗಿ ನೋಡಿದರೆ 1997-98 ರ ಮೊದಲರ್ಧದಲ್ಲಿ ಕಂಡದ್ದಕ್ಕಿಂತ ಹೆಚ್ಚಿನ ಲಾಭವನ್ನು ಅವು 1998-99 ರ ಮೊದಲರ್ಧದಲ್ಲಿ ಕಂಡಿವೆಯಂತೆ ಉಳಿದೆಲ್ಲ ಕಂಪನಿಗಳು

ಕಳೆದ ವರ್ಷಕ್ಕಿಂತ ಕಡಿಮೆ ಲಾಭ ಕಾಣುತ್ತಿರುವಾಗ ಈ ಎರಡು ತರಹದ ಕಂಪನಿಗಳು ಲಾಭ ತೋರಿಸುತ್ತಿರುವುದು ಎದ್ದು ಕಾಣುತ್ತಿದೆ. ಈ ಎರಡೂ ತರಹದ ಕಂಪನಿಗಳು ಲಾಭ ಗಳಿಸುತ್ತಿರುವುದರಿಂದ ಜನಸಾಮಾನ್ಯರಿಗೇನೂ ಅನುಕೂಲವಾಗಿಲ್ಲ ಬದಲಿಗೆ ಅನಾನುಕೂಲವೇ ಆಗಿದೆ. ಔಷಧಿಗಳ ಬೆಲೆ ಗಗನಕ್ಕೇರಿ ಹೋಗಿದೆ ಮನುಷ್ಯನ ಆರೋಗ್ಯವನ್ನು ಹೆಚ್ಚಿಸುವ ಮತ್ತು ರೋಗ ರುಜಿನಗಳಿಂದ ಮುಕ್ತ ಮಾಡುವ ಔಷದಗಳು ಸುಲಭ ಬೆಲೆಯಲ್ಲಿ ದೊರೆಯುವಂತಾಗಿದ್ದರೆ ಆಗ ಇಡೀ ಜನ ಸಮುದಾಯಕ್ಕೆ ಅದರಿಂದ ಲಾಭವಾಗುತ್ತಿತ್ತು ಅದಕ್ಕೆ ಬದಲಿಗೆ ಔಷದಗಳ ಬೆಲೆಗಳು ಗಗನಕ್ಕೇರಿ ಇಡೀ ಜನಸಮುದಾಯಕ್ಕೆ ಆರೋಗ್ಯ ಕೈಗೆಟುಕದ ವಸ್ತುವಾಗಿದೆ. ಕಂಪನಿಗಳಿಗೆ ಮಾತ್ರ ಲಾಭ. ಹಾಗೆಯೇ ಮಾಹಿತಿ ತಂತ್ರಜ್ಞಾನ. ಮಾಹಿತಿ ತಂತ್ರಜ್ಞಾನ ಜನ ಸಾಮಾನ್ಯರ ಬಳಕೆಗೆ ಸುಲಭವಾಗಿ ದೊರಕುವಂತಾದರೆ ಆಗ ಅದರ ಉಪಯುಕ್ತತೆ ವಿಶಾಲವಾಗುತ್ತದೆ. ಸಾರ್ವಜನಿಕ ಶಿಕ್ಷಣ, ಆರೋಗ್ಯ ಸಂಪರ್ಕ ಇತ್ಯಾದಿಗಳಲ್ಲೆಲ್ಲ ಅತ್ಯಂತ ಮಹತ್ತರ ಪಾತ್ರವನ್ನು ಇದು ವಹಿಸಬಲ್ಲಂಥ ಸಾಮರ್ಥ್ಯ ಹೊಂದಿದೆ. ಆದರೆ ಇದೂ ಲಾಭಖೋರರ ಪಿಪಾಸೆಗೆ ಬಲಿ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಹೇಗೆ ಕೆಲವೇ ಕೆಲವರ ಲಾಭಕ್ಕಾಗಿ ಬಳಕೆಯಾಗಬಲ್ಲದು ಹೇಗೆ ಕೆಲವೇ ಕೆಲವರಿಗೆ ಲಾಭವಾಗಿ ಉಳಿದ ಬಹುತೇಕ ಜನ ಇದರ ಫಲಗಳಿಂದ ವಂಚಿತರಾಗುತ್ತಾರೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ನೂರು ಕೋಟಿಗೂ ಹೆಚ್ಚು ಜನ ವಾಸಿಸುವ ಭಾರತದಲ್ಲಿ ಇಂತಹ ಆಧುನಿಕ ತಂತ್ರಜ್ಞಾನಗಳ ಲಾಭ ಕೆಲವೇ ಕೆಲವರಿಗಾದರೆ ಉಳಿದ ಬಹುತೇಕರ ಪಾಡೇನು? ಉದಾರೀಕರಣದ ನೀತಿಗಳು ಈ ದಿಸೆಗೆ ವಿರುದ್ಧವಾಗಿಯೇ ಚಿಂತಿಸುತ್ತವೆ. ಕಂಪನಿಗಳ ಲಾಭವೇ ಅದಕ್ಕೆ ಮುಖ್ಯ. ಈ ಕಂಪನಿಗಳ ಲಾಭ ಜನಕ್ಕೆ ಹರಿದು ಬರುತ್ತದೆ ಎಂದು ಅದು ಹೇಳುತ್ತದೆ. ಆದರೆ ಕಂಪನಿಗಳಿಂದ ಅದು ಕೆಳಗೆ ಹರಿದು ಬರುವುದೇ ಇಲ್ಲ.

ಕಳ್ಳರ ಕೈಲಿ ಸಂಪತ್ತು ಸುಭದ್ರ?

ದೇಶದ ಆಹಾರ ಧಾನ್ಯಗಳ ದಾಸ್ತಾನು ಮಾಡುವ ಕಾರ್ಯವನ್ನು ಖಾಸಗಿಯವರಿಗೆ ಒಪ್ಪಿಸಿದರೆ ಹೇಗೆ? ಬಹಳ ಸಮರ್ಥವಾಗಿ ಮಾಡುತ್ತಾರೆ ಎಂದು ಬಂಡವಾಳಿಗರ ಸಂಸ್ಥೆ ಕಾನ ಫೆಡರೇಷನ್ ಆಫ್ ಇಂಡಿಯಾ ಇಂಡಸ್ಟ್ರೀಸ್ ಹೇಳಿಕೊಂಡಿದೆ. ಅಂದರೆ ಈಗ ಭಾರತ ಆಹಾರ ಪ್ರಾಧಿಕಾರ ಅಥವಾ ಎಫ್.ಸಿ.ಐ. ಮಾಡುತ್ತಿರುವ ಕಾರ್ಯವನ್ನು ಖಾಸಗಿಯವರಿಗೆ ಒಪ್ಪಿಸಬೇಕು ಎಂಬುದೇ ಅವರ ಇಂಗಿತ. ಬೆಲೆ ಹೆಚ್ಚಳದ ಪರಿಸ್ಥಿತಿಯ ಅವಕಾಶ ಪಡೆದು ಅವರು ಬೆಲೆ ಇಳಿಸುವ ಮತ್ತು ಸಮರ್ಥತೆ ಹೆಚ್ಚಿಸುವ ಸಲುವಾಗಿ 12 ಅಂಶಗಳ 'ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದಾರೆ. ಇದರಲ್ಲಿ ಸೇರಿರುವ ಇತರ ಮುಖ್ಯ ಅಂಶಗಳೆಂದರೆ ಕೃಷಿ ವ್ಯಾಪಾರ ಮತ್ತು ರಫ್ತಿನ ಮೇಲಿರುವ ನಿರ್ಬಂಧಗಳನ್ನು ಕಡಿಮೆ ಮಾಡುವುದು, ಕೃಷಿ ಲಾಗುವಾಡಿನ ಮೇಲಿನ ಸಹಾಯಧನವನ್ನು ಕಡಿಮೆ ಮಾಡುತ್ತಾ ಹೋಗುವುದು ಗ್ರಾಮೀಣ ಸಾಲಗಳನ್ನು ಹೆಚ್ಚಿಸುವುದು, ಬೆಳೆ ವಿಮೆ ಜಾರಿಗೆ ತರುವುದು ಇತ್ಯಾದಿ ಸೇರಿವೆ.

ಅತ್ಯಂತ ಹೆಚ್ಚಿನ ಲಾಭ ದೊರೆಯುವಲ್ಲಿ ಮಾತ್ರ ಮೂಗುತೂರಿಸುವ ಅಭ್ಯಾಸವುಳ್ಳ ವಲಯ ಆಕರ್ಷಕವಾಗಿ ಕಾಣತೊಡಗಿದೆ. ಹೂಗಾರಿಕೆ, ತರಕಾರಿ, ಮೀನು ಸಗಾಣಿಕೆ; ಮತ್ತಿತರ ಹೆಚ್ಚು ಲಾಭ ತರುವ ವಲಯಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿರುವ ಇವರು ತಮಗೆ ಬೇಕಾದ ರೀತಿಯ ಉದಾರೀಕರಣವನ್ನು ಬಯಸುತ್ತಿದ್ದಾರೆ ಬಿಜೆಪಿ ಆಳ್ವಿಕತದಡಿ ಅಕ್ರಮ ದಾಸ್ತಾನುಗಳನ್ನು ಮಾಡಿ ಬೆಲೆಯೇರಿಕೆಗೆ ಮಣೆ ಹಾಕಿಕೊಟ್ಟಿರುವ ಇವರುಗಳ ಕೈಗೇ ಆಹಾರ ದಾಸ್ತಾನಿನ ಜವಾಬ್ದಾರಿ ಕೊಟ್ಟರೆ ದೇಶದ ಪರಿಸ್ಥಿತಿ ಏನಾಗಬಹುದೆಂಬುದನ್ನು ನೀವೇ ಊಹಿಸಿಕೊಳ್ಳಿ.

ಆಮದು ತರುವ ಸೌಭಾಗ್ಯ

ದೇಶದಲ್ಲಿ ಅಭಾವವಿದೆಯೇ? "ಆಮದು ಮಾಡಿಕೊಳ್ಳಿ" ಎಂಬುದು ಉದಾರೀಕರಣವಾದಿ ಸರ್ಕಾರಗಳ ಮಂತ್ರ. ಆದರೆ ಭಾರತದಂತಹ ಬೃಹತ್ ದೇಶ ಆಮದು ಮಾಡಿಕೊಳ್ಳ ಹೊರಟರೆ ಏನಾಗುತ್ತದೆ?

ದೇಶದಲ್ಲಿ ದ್ವಿದಳ ಧಾನ್ಯಗಳ ಬೆಲೆ ಏರಿರುವುದರಿಂದ ಬೆಲೆಗಳನ್ನು ಇಳಿಸಲು ಆಮದು ಮಾಡಿಕೊಳ್ಳುವ ಮಂತ್ರವನ್ನು ಸರ್ಕಾರ ಪಠಿಸಿತು. ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ದ್ವಿದಳ ಧಾನ್ಯಗಳ ಬೆಲೆ ಗಗನಕ್ಕೇರಿದೆಯಂತೆ. ಹಿಂದೆ ಭಾರತ ಸಕ್ಕರೆ ಆಮದು ಮಾಡಿಕೊಳ್ಳ ಹೊರಟಾಗಲೂ ಇದೇ ತರಹದ ಅನುಭವವಾಗಿತ್ತು. ಅಂತರ್ರಾಷ್ಟ್ರೀಯ ಬೆಲೆಗಳು ಏರುವುದಕ್ಕೆ ದೇಶದ ಭ್ರಷ್ಟ ರಾಜಕಾರಣಿಗಳು/ಬಂಡವಾಳಿಗರೂ ಕಾರಣರಾಗಿದ್ದರು. ಅಂತರ್ರಾಷ್ಟ್ರೀಯ ಮಾರು ಕಟ್ಟೆಯಲ್ಲಿ ಕಡಿಮೆ ಬೆಲೆ ಇರುವಾಗ ಹೆಚ್ಚಿನ ಬೆಲೆ ಕೊಟ್ಟು ಆಮದು ಮಾಡಿಕೊಳ್ಳುವ ಮನೆ ಮುರುಕತನದವರಿಗೂ ನಮ್ಮಲ್ಲೇನೂ ಕಡಿಮೆ ಇಲ್ಲ. ಕೊನೆಗೆ ಈ ಹೆಚ್ಚಿನ ಬೆಲೆಯ ಹೊರೆಯನ್ನು ಜನಸಾಮಾನ್ಯರು ಮಾತ್ರ ಹೊರಬೇಕು ತಾನೆ? ಇದು ಉದಾರೀಕರಣ!

ದುರ್ಬಲರನ್ನು ಸಾಯಲು ಬಿಡಿ

ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ. ದುರ್ಬಲ ಬ್ಯಾಂಕುಗಳಿಗೆ ಸರ್ಕಾರ ನೆರವು ನೀಡಬಾರದು ಎಂದು ಸರ್ಕಾರಕ್ಕೆ ಸಲಹೆ ನೀಡಿದೆ. ಇದರ ಬದಲು ಸರ್ಕಾರ ಆಸ್ತಿ ಪುನರ್ರಚನಾ ಕಂಪನಿಗಳಿಗೆ ನಾನೂರು ಕೋಟಿ ರೂಪಾಯಿಗಳನ್ನು ತೆಗೆದಿರಿಸಿ ಪ್ರೋತ್ಸಾಹ ನೀಡಬೇಕು ಎಂದಿದೆ ಅದು. ದೇಶದ ಹಣಕಾಸು ವಲಯದ ಉದಾರೀಕರಣದ ಹಾದಿಗೆ ಈ ಶಿಫಾರಸ್ಸು ಹೊಂದುವಂತಿದೆ ದುರ್ಬಲ ಬ್ಯಾಂಕುಗಳಿಗೆ ನೆರವು ನೀಡದೆ ಪ್ರಬಲ ಬ್ಯಾಂಕುಗಳು ಮಾತ್ರ ಉಳಿವ ಮಾರುಕಟ್ಟೆ ಆರ್ಥಿಕದ ತತ್ವ ಇದು. ಆಸ್ತಿ ಪುನರ್ರಚನಾ ನಿಧಿ/ ಕಂಪನಿ ಸ್ಥಾಪಿಸಿ ಆದರಿಂದ ಬಂಡವಳಿಗರ ಸಾಲವನ್ನು ವ್ಯಾಪಾರದ ಸರಕನ್ನಾಗಿ ಪರಿವರ್ತಿಸಿ ಅದರಲ್ಲೂ ಅವರು ಲಾಭ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಿಸುವ ಉದ್ದೇಶ ಮತ್ತು ಪ್ರಯತ್ನ ಇದರಲ್ಲಿದೆ.

ದುರ್ಬಲ ಬ್ಯಾಂಕುಗಳು, ಈ ಬ್ಯಾಂಕುಗಳ ಉದ್ಯೋಗಿಗಳು ಈ ನೀತಿಯ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ.ಹಣಕಾಸು ವಲಯದ ನೌಕರರೆಲ್ಲ ಇಂತಹ ನೀತಿಗಳನ್ನು ವಿರೋಧಿಸುವ ಹೋರಾಟವನ್ನು ರೂಪಿಸಲೇಬೇಕಾಗುತ್ತದೆ.

ಮೀನು ಉದ್ದಿಮೆಗೆ ಯುರೋಪಿನ ಬೆದರಿಕೆ

ಭಾರತದ ಮೀನು ಸಂಸ್ಕರಣ ಉದ್ದಿಮೆಯನ್ನು ನಿಷೇಧಿಸುವ ಭಯವನ್ನು ಯುರೋಪಿನ ಸಮುದಾಯ ಒಡ್ಡಿವೆ.

ಯುರೋಪಿನ ಸಮುದಾಯದ ಪ್ರಕಾರ ಮೀನು ಸಂಸ್ಕರಣ ಉದ್ದಿಮೆಯಲ್ಲಿ ಕಾರ್ಮಿಕ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂಬುದು.

ಭಾರತದಲ್ಲಿ ಕಾರ್ಮಿಕ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎನ್ನುವುದು ನಿಜವೇ ಇರಬಹುದಾದರೂ ಯುರೋಪಿನ ಈ ನಿಷೇಧ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತದೆ? ಈ ಉದ್ದಿಮೆಯ ಮೇಲೆ ಅವಲಂಬಿಸಿರುವ ಲಕ್ಷ ಲಕ್ಷ ಕಾರ್ಮಿಕ ಕುಟುಂಬಗಳು ಕಂಗಾಲಾಗುವ ಪರಿಸ್ಥಿತಿ ಬಂದರೆ ಯುರೋಪಿನ ಸಮುದಾಯ ಅದಕ್ಕೆ ಎಂತಹ ಪರಿಹಾರ ಸೂಚಿಸುತ್ತದೆ!

ಭಾರತ ಮೀನು ಸಂಸ್ಕರಣ ಉದ್ದಿಮೆಯ ಶೋಷಣೆ ಮಾಡುವ ಉದ್ದೇಶದಿಂದ ಬೆಲೆಗಳ ಚೌಕಾಸಿಯ ಬಲ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಬಂದಿರಬಹುದಾದ ಈ ಬೆದರಿಕೆಯ ಹಿಂದೆ ಪ್ರಾಮಾಣಿಕ ಕಳಕಳಿ ಇರಲು ಸಾಧ್ಯವೆ?

ಹವಾಲ ಪುಟ್ಟ ಅಪರಾಧ

ಹವಾಲವನ್ನು ಕ್ರಿಮಿನಲ್ ಅಪರಾಧವನ್ನಾಗಿ ಪರಿಗಣಿಸ ಬೇಡಿ ಬದಲಿಗೆ ಸಿವಿಲ್ ಅಪರಾಧವನ್ನಾಗಿ ಪರಿಗಣಿಸಿ ಎಂದು ಸಂಸದರ ಸಮಿತಿ ಯೊಂದು ಶಿಫಾರಸು ಮಾಡಿದೆ.

ಫೆರಾಕ್ಕೆ ಬದಲು ಫೆಮಾವನ್ನು ಜಾರಿಗೆ ತರುವಾಗ ಇಂತಹ ಬದಲಾವಣೆ ಮಾಡಬೇಕು ಎಂದು ಅದು ಹೇಳಿದೆ.

ಕಂಪನಿಗಳು ಉದ್ಯಮ ಪತಿಗಳು ಈ ಬೇಡಿಕೆಯನ್ನು ಹಲವು ದಿನದಿಂದ ಇಡುತ್ತಾ ಬಂದಿದ್ದಾರೆ. ಹವಾಲದಲ್ಲಿ ರಾಜಕಾರಣಿಗಳು ಮತ್ತು ಬಂಡವಾಳಿಗರು ಜತೆ ಜತೆಯಾಗಿ ಸಿಕ್ಕಿ ಹಾಕಿಕೊಂಡು ಒದ್ದಾಡುವ ಪ್ರಸಂಗ ಬಂದಿದ್ದರಿಂದ ಈಗ ಇಂತಹ ಬೇಡಿಕೆ ಬಂದಿದೆ. ಹಲವು ಸಂಸದರು ಇಂತಹ ಅಪರಾಧದ ಆಪಾದನೆ ಎದುರಿಸುತ್ತಿರುವದರಿಂದ ಅವರಿಗೂ ಇದರಿಂದ ಬಿಡುಗಡೆ ಬೇಕಾಗಿದೆ. ಆದ್ದರಿಂದಲೇ ಇಂತಹ ಶಿಫಾರಸ್ಸು ಬಂದಿದೆ ಅಲ್ಲವೆ?

ಗುರಿಗಳನ್ನೇ ಕೆಳಗಿಳಿಸಿದ ಯೋಜನೆ

ಒಂಬತ್ತನೇ ಪಂಚವಾರ್ಷಿಕ ಯೋಜನೆ ಯ ಗುರಿಗಳನ್ನೇ ಈಗ ಕೆಳಗಿಳಿಸಲಾಗಿದೆ ಸರಾಸರಿ ಒಟ್ಟು ಬೆಳವಣಿಗೆಯ ಗುರಿಯನ್ನು ಶೇ 7 ರಿಂದ ಶೇ 6.5 ಕ್ಕೆ ಇಳಿಸಲಾಗಿದೆ.

ಅಂತರ್ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಮತ್ತು ಯೋಜನೆಯ ಪ್ರಾರಂಭಿಕ ವರ್ಷಗಳಲ್ಲಿ ಕಡಿಮೆ ಬೆಳವಣಿಗೆ ದರ ಇರುವುದರಿಂದ ಈಗ ಹಿಂದೆ ಇಟ್ಟುಕೊಂಡ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬ ವಿವರವನ್ನು ನೀಡಲಾಗಿದೆ.

ಈ ವರ್ಷದ ಮೊದಲರ್ಧದಲ್ಲಿ ಸಾಧಿಸಲಾಗಿರುವ ಔದ್ಯಮಿಕ ಮತ್ತು ಕೃಷಿ ಬೆಳವಣಿಗೆ ಪ್ರಮಾಣವನ್ನು ಗಮನಿಸಿದರೆ ಈ ಉದ್ದೇಶಿತ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಕೇಂದ್ರದ ಬಿಜೆಪಿಯ ಸರ್ಕಾರಕ್ಕೆ ಹೆಚ್ಚಿನ ಬೆಳವಣಿಗೆ ಸಾಧಿಸುವ ಸಾಮರ್ಥ್ಯವಂತೂಖಂಡಿತ ಇಲ್ಲ. ತನ್ನ ವೈಫಲ್ಯಗಳಿಗೆ ಬೇರೆ ಕಡೆಗೆ ಕಾರಣಗಳನ್ನು ಕಂಡು ಹಿಡಿಯುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ ಅಷ್ಟೇ.

ಕರ್ನಾಟಕದಲ್ಲಿ ಕಳೆದವಾರ

ನವೆಂಬರ್-13

- ಪಟೇಲ್ ನಾಯಕತ್ವ ಪ್ರಶ್ನೆ: ಶಾಸಕಾಂಗ ಸಭೆಯಲ್ಲಿ ಯಾವುದೇ ತಿರ್ಮಾನವಿಲ್ಲ: ಶರದ್‌ಯಾದವ್‌ಗೆ ಅಧಿಕಾರ
- ಮೂರು ಸಾವಿರ ಮಠ ವಿವಾದ: ಪಂಜಿನ ಮೆರವಣಿಗೆ ಮೇಲೆ ಲಾಠಿ ಪ್ರಹಾರ 75 ಗಣ್ಯರ ಬಂಧನ.
- ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸಿಪ್ಪೇಗೌಡ ಪುನರಾಯ್ಕೆ.

ನವೆಂಬರ್ -14

- ಮೂರು ಸಾವಿರ ಮಠ ವಿವಾದಕ್ಕೆ ತೆರೆ. ನಿರಶನ ಅಂತ್ಯ. ಐವರು ಮಠಾಧೀಶರ ಸಮಿತಿಗೆ ಅಸ್ತು.
- ಕೋಲಾರದಲ್ಲಿ ಬಸ್ ಅಪಘಾತ ಬಾಲಕಿ ಸಾವಿಗೆ ಪ್ರತಿಭಟನೆ ಅಶ್ರುವಾಯು
- ಸರ್ಕಾರಿ ಸಂಸ್ಥೆಗಳಲ್ಲಿ ಮೈಸೂರು ಸ್ಯಾಂಡಲ್ ಕಡ್ಡಾಯಕ್ಕೆ ಮುಖ್ಯ ಮಂತ್ರಿ ಆದೇಶ

ನವೆಂಬರ್-15

- ಗ್ರಾಮೀಣರಿಗೆ ಕೃಪಾಂಕ ಅಸಿಂಧು. ಸುಪ್ರಿಂಕ್ಕೋಟಿಗೆ ರಾಜ್ಯದ ಮೇಲ್ಮನವಿ
- ರಾಜ್ಯದ 107 ತಾಲೂಕುಗಳಲ್ಲಿ ಅಧಿಕ ಮಳೆ. 14 ತಾಲೂಕುಗಳಲ್ಲಿ ಅತ್ಯಲ್ಪ ಮಳೆ.

ನವೆಂಬರ್-16

- ಖಾಸಗೀಕರಣ, ಜಾಗತೀಕರಣ ಹಾಗೂ ಕೋಮುವಾದದ ವಿರುದ್ಧ ಸಾ.ಸಂ.ರಾ. ವೇದಿಕೆಯಿಂದ ಬೃಹತ್ ರ್‍ಯಾಲಿ
- ಸಮರ್ಥವಾಗಿ ಕೆಲಸ ನಿರ್ವಹಿಸಲು ಅಧಿಕಾರಿಗಳಿಗೆ ಮುಖ್ಯಮಂತ್ರಿ ತಾಕೀತು.
- ದಳ ಬಿಕ್ಕಟ್ಟು-ಶರದ್‌ಯಾದವ್ ಸೂತ್ರಕ್ಕೆ ಎಲ್ಲರು ಒಪ್ಪಬೇಕು.

ನವೆಂಬರ್-17

- ಧರ್ಮಸಿಂಗ್, ಖರ್ಗೆ, ಎಸ್ಕೆ ಸಮ್ಮುಖದಲ್ಲಿ ರಾಯಚೂರು ಕಾಂಗ್ರೆಸ್ ಸಭೆಯಲ್ಲಿ ಮಾರಾಮಾರಿ.

ನವೆಂಬರ್-18

- ಬೆಳೆಹಾನಿ ಕೇಂದ್ರದಿಂದ ಹೆಚ್ಚು ವರಿ ನೆರವು ಅಸಂಭವ ಕೇಂದ್ರ ಅಧ್ಯಯನ ತಂಡ.
- ಬಾಗೂರು ನವಿಲೆ ದೌರ್ಜನ್ಯ ವಿರುದ್ಧ ಮೌನ ಮೆರವಣಿಗೆ.

ನವೆಂಬರ್-19

- ಮಳೆ ಹಾನಿ ರೂ 1352 ಕೋಟಿ ಪರಿಹಾರಕ್ಕೆ ರಾಜ್ಯದ ಮನವಿ
- ರಾಯಚೂರು ಥರ್ಮಲ್ ವಿದ್ಯುತ್ ಸ್ಥಾವರದ 5ನೇ ಘಟಕ ಕಾರ್ಯಾರಂಭ
- ವೈದ್ಯ ಸ್ನಾತಕೋತ್ತರ ಪದವಿ ಬಳಿಕ ಅಧ್ಯಾಪಕ ವೃತ್ತಿ ಸೇವೆ ಕಡ್ಡಾಯ-ರಾಜ್ಯ ಸರ್ಕಾರ.

ರಾಜ್ಯ ಅಂಗನವಾಡಿ ನೌಕರರ ಮುಂದುವರಿದ ಹೋರಾಟ

1994 ರಿಂದ ಸಿಐಟಿಯು ನೈತೃತ್ವದಲ್ಲಿ ರಾಜ್ಯ ಅಂಗನವಾಡಿ ನೌಕರರ ವೇಗಗೊಂಡ ಹೋರಾಟದ ಅಂಗವಾಗಿ ನವೆಂಬರ್ 13 ರಿಂದ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ನೇತೃತ್ವದಲ್ಲಿ ಪ್ರಾರಂಭ ವಾದ ಅನಿರ್ಧಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಹಾಗೂ ನವೆಂಬರ್ 17 ರಂದು ಕೆ.ಆರ್ ವೃತ್ತದಲ್ಲಿ ಸಾವಿರಾರು ಕಾರ್ಯ ಕರ್ತೆಯರು ಜಮಾಯಿಸಿ ಧರಣಿ ನಡೆಸಿದರು. ಇವರ ಸತತ ಹೋರಾಟಕ್ಕೆ ಮನ್ನಣೆ ನೀಡಿದ ರಾಜ್ಯ ಸರ್ಕಾರ ತನ್ನ ವ್ಯಾಪ್ತಿಯ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದೆ.

ನವೆಂಬರ್ 17 ರಂದು ಸಂಘದ ರಾಜ್ಯಾಧ್ಯಕ್ಷೆ ಎನ್. ಪ್ರಭಾ, ಸಿಐಟಿಯು ರಾಜ್ಯ ಮುಖಂಡರಾದ ಎಸ್.ಸೂರ್ಯ ನಾರಾಯಣರಾವ್ ಹಾಗೂ ವಿಜೆಕೆ ನಾಯರ್‌ರ ನಿಯೋಗದೊಂದಿಗೆ ರಾಜ್ಯ ಬಂಧಿಖಾನೆ ಸಚಿವ ವಿ.ಸೋಮಣ್ಣ, ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಸಿದ್ಧಯ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು ಮಾತುಕತೆ ನಡೆಸಿ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು ನ್ಯಾಯಸಮ್ಮತವಾಗಿವೆ ಯೆಂದರು. ರಾಜ್ಯ ಸರ್ಕಾರದ ಅಧೀನದಲ್ಲಿ ಇರುವ ಬೇಡಿಕೆಗಳಾದ 15 ದಿನಗಳ ಬೇಸಿಗೆ ರಜೆ, ನೌಕರರಿಗೆ ಹಸಿರು ಪಡಿತರ ಚೀಟಿ ಹಾಗೂ ಮೇಲ್ವಿಚಾರಕಿಯರ ಹುದ್ದೆಗೆ ಶೇ 45 ಮೀಸಲಾತಿ, ಬೋನಸ್ ಬೇಡಿಕೆಗಳನ್ನು ಮನ್ನಿಸಿ ನವೆಂಬರ್ 25 ರಂದು ಮುಖ್ಯ ಮಂತ್ರಿ ಸಮ್ಮುಖದಲ್ಲಿ ನಡೆಯುವ ಸಭೆಯಲ್ಲಿ ಆದೇಶ ಹೊರಡಿಸುವ ಲಿಖಿತ ಭರವಸೆ ನೀಡಿದ್ದಾರೆ.

ಕಾಂ. ವರಲಕ್ಷ್ಮಿ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ

ಹಲವು ಬಾರಿ ಮಂತ್ರಿ ಮಹೋದಯರಿಂದ ಭರವಸೆಗಳ ಮಹಾಪೂರವನ್ನೆ ಕಂಡಿರುವ ಕಾರ್ಯಕರ್ತೆಯರು ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಕೈಬಿಟ್ಟು ನವೆಂಬರ್ 25 ವರೆಗೆ ಉಪವಾಸ ಸತ್ಯಾಗ್ರಹ ಮುಂದುವರಿಸಿದ್ದಾರೆ.

ಬಿಪಿಎಲ್ ಕಾರ್ಮಿಕರ ವಿಧಾನ ಸೌಧ ಚಲೋ

ಬಿಪಿಎಲ್ ಕಾರ್ಖಾನೆಗಳಲ್ಲಿ ಸುಮಾರು 10 ಸಾವಿರ ಕಾರ್ಮಿಕರು ರಾಜ್ಯದಲ್ಲಿ ದುಡಿಯುತ್ತಿದ್ದಾರೆ. ಆದರೆ ಸರ್ಕಾರ ನಿಗದಿ ಮಾಡಿದ ಕನಿಷ್ಠ ಕೂಲಿಯನ್ನು ಎಷ್ಟೊ ವರ್ಷಗಳಿಂದ ನೀಡುತ್ತಿಲ್ಲ. ಈ ಕಂಪೆನಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕೆಲಸದ ಭದ್ರತೆಯಾಗಲಿ ಅಥವಾ ಕಾನೂನು ರೀತಿಯ ಸೌಲಭ್ಯಗಳಾಗಲಿ ಸಿಗುತ್ತಿಲ್ಲವೆಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದು ಆದರೆ ಇದು ನಿಜ.

ತರಬೇತಿ ಹೆಸರಿನಲ್ಲಿ ಕಾರ್ಮಿಕರನ್ನು ನೇಮಿಸಿಕೊಂಡು ಅತ್ಯಂತ ಹೆಚ್ಚಿಗೆ ಉತ್ಪತ್ತಿಯನ್ನು ಮಾಡಿಸಿಕೊಳ್ಳುವುದು, ಈ ಕಾರ್ಮಿಕರಿಗೆ ಆದಷ್ಟು ಕಡಿಮೆ ಸಂಬಳ ನೀಡುವುದು 2 ವರ್ಷದ ನಂತರ ತರಬೇತಿ ಮುಗಿಯಿತೆಂದು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿ ಮನೆಗೆ ಕಳಿಸುವುದು ಇಲ್ಲಿನ ಪದ್ಧತಿ ಅಲ್ಲದೆ ಈ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರಿಗೆ ಕಾನೂನು ರೀತಿಯ ಸೌಲಭ್ಯಗಳನ್ನು ನೀಡದೆ ಮಾನಸಿಕ ಒತ್ತಡ ನೀಡುವುದು ಮದುವೆಯಾದ ಮೇಲೆ ಅವರೇ ಕೆಲಸ ಬಿಟ್ಟು ಹೋಗುವಂತೆ ಒತ್ತಾಯಿಸುವುದು ಈ ಕಂಪೆನಿಯಲ್ಲಿ ನಡೆದು ಬಂದ ಪದ್ಧತಿ. ಕಾರ್ಮಿಕರು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಿ.ಐ.ಟಿ.ಯು ನಾಯಕತ್ವದಲ್ಲಿ ಸಂಘವನ್ನು ರಚಿಸಿಕೊಂಡಿದ್ದಕ್ಕೆ ಸಂಘವನ್ನು ಮುರಿಯಲು ಮಾಲೀಕರು ನಡೆಸಿದ ಪ್ರಯತ್ನ ಒಂದಲ್ಲ ಎರಡಲ್ಲ. ಕಾರ್ಮಿಕರು ಸಂಘವನ್ನು ಬಿಡಲು ವಿರೋಧ ಮಾಡಿದ್ದಕ್ಕೆ ಸುಮಾರು 60 ಜನ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಸಮಿತಿ ಸದಸ್ಯರನ್ನು ಅಮಾನತ್ತು ಮಾಡಲಾಗಿದೆ. ಸುಮಾರು 150 ಜನ ಕಾರ್ಮಿಕರನ್ನು ಅಕ್ರಮವಾಗಿ ವಜಾ ಮಾಡಿ ಕಾರ್ಮಿಕ ಮುಖಂಡರನ್ನು ಅಕ್ರಮವಾಗಿ ವರ್ಗಾವಣೆ ಮಾಡಿದೆ. ಈ ಎಲ್ಲಾ ಚಟುವಟಿಕೆಗಳನ್ನು ವಿರೋಧಿಸಿ ನವೆಂಬರ್ 12 ರಂದು ಮೂರು ಸಾವಿರ ಕಾರ್ಮಿಕರು ವಿಧಾನ ಸೌಧ ಚಲೋ ನಡೆಸಿದರು.

ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಹಲವು ಬಾರಿ ಮನವಿ ಸಲ್ಲಿಸಿದರೂ ಕಿವಿಗೊಡದ ಆಡಳಿತ ವರ್ಗದ ಧೋರಣೆ ವಿರೋಧಿಸಿ ಮುಷ್ಕರ ನಡೆಸಲು ನಿರ್ಧರಿಸಿದಾಗ ಪೋಲಿಸ್ ಈ ಪ್ರದೇಶದಲ್ಲಿ ನಿಷೇದಾಜ್ಞೆ ಜಾರಿ ಗೊಳಿಸಿರುವುದನ್ನು ರದ್ದು ಗೊಳಿಸುವಂತೆ ರಾಜ್ಯ ಕಾರ್ಮಿಕ ಸಚಿವರಿಗೆ ಕಾರ್ಮಿಕ ನಿಯೋಗ ಇದೇ ಸಂದರ್ಭದಲ್ಲಿ ಮನವಿ ಮುಖಾಂತರ ಒತ್ತಾಯಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಮಧ್ಯ ಪ್ರವೇಶಿಸುವಂತೆ ಮನವಿ ಮಾಡಿದೆ.

ಮಾಲಕರ ಪರವಾಗಿ ಪೋಲೀಸರ ಮಧ್ಯಪ್ರವೇಶ ಮಹಿಳಾ ಕಾರ್ಮಿಕರ ಮೇಲೆ ದೌರ್ಜನ್ಯ

ನವೆಂಬರ್ 19 ರಂದು ಕಾರ್ಖಾನೆಯ ಮುಂದೆ ಶಾಂತಿಯುತ ಪ್ರತಿಭಟನೆಯನ್ನು ನಡೆಸುತ್ತಿದ್ದ ಮಹಿಳಾ ಕಾರ್ಮಿಕರನ್ನು ಪೋಲೀಸರು ಅನಗತ್ಯವಾಗಿ ಎಳೆದ್ಹಾಡಿ ಲಾಠೀ ಪ್ರಹಾರ ನಡೆಸಿದರು ಎಂದು ಬಿ.ಪಿ.ಎಲ್. ಕಾರ್ಮಿಕ ಸಂಘ ಆಪಾದಿಸಿದೆ. ಪೋಲೀಸರ ಈ ದಬ್ಬಾಳಿಕೆ ಯಲ್ಲಿ ಒಬ್ಬ ಗರ್ಭಿಣಿ ಕಾರ್ಮಿಕರು ತೀವ್ರವಾಗಿ ಗಾಯಗೊಂಡು ಆಕೆಯನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. ಇದನ್ನು ಬಲವಾಗಿ ಖಂಡಿಸಿರುವ ಜನವಾದಿ ಮಹಿಳಾ ಸಂಘಟನೆ ಮಾಲಕರು ಮತ್ತು ಕಾರ್ಮಿಕರ ನಡುವಿನ ವಿವಾಧದಲ್ಲಿ ಪೋಲೀಸರು ಮಧ್ಯಪ್ರವೇಶ ಮಾಡಿ ಕಾರ್ಮಿಕರಿಗೆ ಕಿರುಕುಳ ಕೊಡಲು ಈ ರೀತಿಯ ಅಮಾನವೀಯ ಕೃತ್ಯಕ್ಕಿಳಿದ ಪೋಲೀಸರನ್ನು ಅಮಾನತ್ತು ಮಾಡಬೇಕು ಎಂದು ಜನವಾದಿ ಮಹಿಳಾ ಸಂಘಟನೆ ಆಗ್ರಹಪಡಿಸಿದೆ. ನವೆಂಬರ್ 20 ರಂದು ಸಿಐಟಿಯು ಮುಖಂಡರಾದ ಗೋಪಾಲ ಗೌಡ, ಗೌರಮ್ಮ ಮತ್ತಿತರರನ್ನು ಬಂಧಿಸಿರುವ ದನ್ನು ಕಾರ್ಮಿಕ ಸಂಘಗಳು ಖಂಡಿಸಿವೆ.

ಸಿಐಟಿಯುಗೆ ಜಯ

ಹರಿಹರದ ಗ್ರಾಸಿಮ್ ಗ್ವಾಲಿಯರ್ ಕಾರ್ಮಿಕ ಚುನಾವಣೆಯ ಫಲಿತಾಂಶ ಕಳೆದ ಸಂಚಿಕೆಯಲ್ಲಿ ಸಿಐಟಿಯುವಿನ 9 ಜನ ಕಾರ್ಯಕಾರಿ ಸದಸ್ಯರು ಆಯ್ಕೆಗೊಂಡರು ಎನ್ನುವುದು ಏಐಟಿಯುಸಿ ಸದಸ್ಯರು ಎಂದು ತಪ್ಪಾಗಿ ಮುದ್ರಿತಗೊಂಡಿದೆ. ಈ ತಪ್ಪಿಗಾಗಿ ವಿಷಾದಿಸುತ್ತೇವೆ

ತ್ರಿಪುರಾ ದಿನಾಚರಣೆ

ದಾವಣಗೆರೆ: ತ್ರಿಪುರಾ ರಾಜ್ಯದಲ್ಲಿನ ಕಾನೂನು ಬಾಹಿರ ಉಗ್ರಗಾಮಿ ಸಂಘಟನೆಗಳು ಮುಗ್ಧ ಜನರ ಮೇಲೆ ಹಲ್ಲೆ-ಸುಲಿಗೆ-ಅಪಹರಣ ನಡೆಸುವುದು, ಎಡಪಕ್ಷಗಳ ಕಾರ್ಯಕರ್ತರನ್ನು ಮತ್ತು ಶಾಸಕರನ್ನು ಅಮಾನುಷವಾಗಿ ಹತ್ಯೆಮಾಡುವುದನ್ನು ವಿರೋಧಿಸಿ ಸಿಪಿಐ(ಎಂ) ಕೇಂದ್ರ ಸಮಿತಿ ಆದೇಶದ ಮೇರೆಗೆ ಸ್ಥಳೀಯ ಸಿಪಿಎಂ ಕಾರ್ಯಕರ್ತರು ಅಭಿಮಾನಿಗಳು ತ್ರಿಪುರಾ ದಿನಾಚರಣೆ ಆಚರಿಸಿದರು.ಉಗ್ರಗಾಮಿಗಳು ಕೂಡಲೇ ತಮ್ಮ ಭೀಕರ ಚಳುವಳಿಗಳನ್ನು ನಿಲ್ಲಿಸುವಂತೆ, ಹಾಗೂ ಬಿಜೆಪಿಯ ಕೇಂದ್ರ ಸರ್ಕಾರ ಹಿಂತೆಗೆದು ಕೊಂಡಿರುವ ಪ್ಯಾರಾ ಮಿಲಿಟರಿ ಪಡೆಯನ್ನು ಕೂಡಲೇ ವಾಪಸ್ಸು ಕಳಿಸಿ ಭದ್ರತೆ ನೆಲೆಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮತ ಪ್ರದರ್ಶನ ನಡೆಸಿ ಮನವಿ ಸಲ್ಲಿಸಲಾಯಿತು.

ತ್ರಿಪುರಾ ಜನತೆ ಧೃಡತೆಯಿಂದ ಉಗ್ರಗಾಮಿ ಗಳನ್ನು ಎದುರಿಸುತ್ತಿರುವುದನ್ನು ಶ್ಲಾಘಿಸಿ ಅವರ ಹೋರಾಟಕ್ಕೆ ಬೆಂಬಲ ನೀಡಲಾಯಿತು. ಪ್ರತಿಭಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಮಹಂತೇಶ್ ಜಿಲ್ಲಾ ಸಮಿತಿ ಸದಸ್ಯ ಕೆ.ಎಲ್. ಭಟ್ ಶಾಖಾಕಾರ್ಯದರ್ಶಿ ಎ.ಎಸ್. ಮೂರ್ತಿ, ಎ.ಐ.ಟಿ.ಯು.ಸಿ.ಯ ಕೆ.ಜಿ. ಶಿವಮೂರ್ತಿ ಎಸ್.ಎಫ್.ಐ.ನ ಮಂಜುನಾಥ್ ಕಾಡಜ್ಜಿ , ಅಂಜಿನಪ್ಪ ಕೆ.ಎಂ, ಕಿರ್ಲೋಸ್ಕರ್ ಯೂನಿಯನ್ನಿನ ಸಿ.ಎಂ. ಜಯಾನಂದ್ ಮತ್ತಿತರ ನಾಯಕರು ಭಾಗವಹಿಸಿದ್ದರು.

ಧಾರವಾಡ

ಕಳೆದ ಕೆಲವು ವರ್ಷಗಳಿಂದ ದೇಶದ ಈಶಾನ್ಯ ರಾಜ್ಯಗಳಲ್ಲಿ ಒಂದಾದ ತ್ರಿಪುರಾ ರಾಜ್ಯದಲ್ಲಿ ಉಗ್ರಗಾಮಿ ಚಟುವಟಿಕೆ ತೀವ್ರ ಗೊಳ್ಳುತ್ತಿರುವುದನ್ನು ಖಂಡಿಸಿ, ನವೆಂಬರ್ 12 ರಂದು ಸಿಪಿಐ(ಎಂ) ಜಿಲ್ಲಾ ಸಮಿತಿ ತ್ರಿಪುರಾ ದಿನಾಚರಣೆ ಆಚರಿಸುವ ಮೂಲಕ ತ್ರಿಪುರಕ್ಕೆ ಹೆಚ್ಚಿನ ಗಡಿಭದ್ರತೆ ಪಡೆ ಕಳುಹಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಿಜೆಪಿ ನೇತೃತ್ವದ ಸರ್ಕಾರ ಎರಡು ಬೆಟಾಲಿಯನ್ ಸೈನ್ಯವನ್ನು ಹಿಂತೆಗೆದು ಕೊಂಡು ತ್ರಿಪುರದಲ್ಲಿ ತ್ರಿರ್ವಗಾಮಿ ಚಟುವಟಿಕೆ ತೀವ್ರಗೊಳ್ಳಲು ಕಾರಣವಾಗಿದೆ. ಇದರಿಂದ ಸಿಪಿಐ(ಎಂ) ಮಂತ್ರಿಗಳನ್ನು ಶಾಸಕರನ್ನು ಮುಖಂಡರನ್ನು ಹಾಗೂ ಕಾರ್ಯಕರ್ತೆಯರನ್ನು ಅಪಹರಿಸುವುದು ಹಣದೋಚುವುದು ಹಾಗೂ ಹತ್ಯೆ ಮಾಡುವ ಮುಖಾಂತರ ರಾಜ್ಯದಲ್ಲಿ ಅರಾಜಕತೆ ತಲೆ ದೋರುವಂತಹ ಪರಿಸ್ಥಿತಿ ಸೃಷ್ಟಿಗೆ ಯತ್ನ ನಡೆಯುತ್ತಿದೆ.

ತ್ರಿಪುರವು ಬರ್ಮ ಹಾಗೂ ಬಾಂಗ್ಲಾ ದೇಶದೊಂದಿಗೆ ಧೀರ್ಘವಾದ ಗಡಿ ಹೊಂದಿರುವುದನ್ನು ಮರೆಮಾಚದೆ ಪಂಜಾಬ್ ಹಾಗೂ ಜಮ್ಮು ಕಾಶ್ಮೀರ ರಾಜ್ಯಗಳಿಗೆ ನೀಡುತ್ತಿರುವ ರಕ್ಷಣೆಯಂತೆಯೇ ತ್ರಿಪುರಕ್ಕೂ ನೀಡಬೇಕೆಂದು ಸಿಪಿಐ(ಎಂ)ನ ಸಿ.ಆರ್.ಭಟ್ ಎಂ.ಬಿ.ಕಟ್ಟಿ, ಆರ್.ಹೆಚ್ ಆಯಿ ಮತ್ತು ಬಿ.ಐ. ಈಳೀಗಾರ ಜಿಲ್ಲಾಧಿಕಾರಿ ಮುಖಾಂತರ ಮನವಿಸಲ್ಲಿಸಿದ್ದಾರೆ.

ಮಂಗಳೂರು: ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ನಂತರ ತ್ರಿಪುರದಿಂದ ಕೇಂದ್ರಿಯ ಸಶಸ್ತ್ರ ಪಡೆಯ ಎರಡು ತುಕಡಿಗಳನ್ನು ಹಿಂತೆಗೆದು ಕೊಂಡದ್ದರಿಂದಾಗಿ ಆ ರಾಜ್ಯದಲ್ಲಿ ಹೆಚ್ಚುತ್ತಿರುವ ಉಗ್ರಗಾಮಿಗಳ ಹಿಂಸಾಚಾರದ ಹಿನ್ನೆಲೆಯಲ್ಲಿ ದೇಶಾದ್ಯಂತ ತ್ರಿಪುರಾ ದಿನವನ್ನು ಆಚರಿಸಲು ಸಿಪಿಐ(ಎಂ) ಕರೆ ನೀಡಿದ ಪ್ರಕಾರ ನಾನಾ ರಾಜ್ಯದವರು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರದರ್ಶನ ನಡೆಯಿತು. ಸಿಪಿಐ(ಎಂ) ನಗರ ಸಮಿತಿಯ ಕಚೇರಿಯಿಂದ ಮೆರವಣಿಗೆಯಲ್ಲಿ ತೆರಳಿದ ಪ್ರದರ್ಶನಕಾರರ ನೇತ್ರತ್ವವನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್ ಜಿಲ್ಲಾ ಸೆಕ್ರೆಟಾರಿಯಟ್ ಸದಸ್ಯರಾದ ಬಿ. ಮಾಧವ ಸಿ. ನಂಜುಂಡಪ್ಪ, ಯು.ಜನಾರ್ಧನ ನಾಯಕ್ ಅಬ್ರಹಾಂ ಕರ್ಕಡ ರಾಮಚಂದ್ರ ಉಚ್ಚಿಲ್ ಜೆ. ಬಾಲಕೃಷ್ಣ ಶೆಟ್ಟಿ ಹಾಗೂ ಜಿಲ್ಲಾ ಸಮಿತಿಯ ಸದಸ್ಯರಾದ ಕೆ. ಪೂವಪ್ಪ ಸಾಲಿಯಾನ್ ಕಮಲಾಕ್ಷ ಬಂಗೇರ, ವಸಂತ ಆಚಾರಿ ಯಾದವ ಶೆಟ್ಟಿ ಜಿಲ್ಲಾ ಪಂಚಾಯತ್ ಸದಸ್ಯೆ ಶ್ರೀಮತಿ ಪದ್ಮಾವತಿ ಎಸ್ ಶೆಟ್ಟಿ ಮೊದಲಾದವರು ವಹಿಸಿದ್ದರು.

ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಆರ್ ಶ್ರೀಯಾನ್ ಅವರು ಬಿಜೆಪಿ ಸರಕಾರವು ತ್ರಿಪುರದ ಎಡರಂಗ ಸರಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವ ರಾಜಕೀಯ ಸಂಕುಚಿತ ಉದ್ದೇಶದಿಂದ ದೇಶದ ಭದ್ರತೆಗೇ ಅಪಾಯ ತಂದೊಡ್ಡಿದೆ ಎಂದು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಸಿ. ನಂಜುಂಡಪ್ಪನವರು ಮಾತನಾಡುತ್ತಾ ತ್ರಿಪುರದ ಗುಡ್ಡಗಾಡು ಜನರ ಮತ್ತು ಬಂಗಾಳಿಗಳ ನಡುವೆ ಸಾಮರಸ್ಯವನ್ನು ಬೆಳೆಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗದ ಜನಪ್ರಿಯತೆಯನ್ನು ಸಹಿಸಲಾರದ ಕೇಂದ್ರ ಸರಕಾರವು ರಾಜ್ಯಕ್ಕೆ ಸಶಸ್ತ್ರ ಪಡೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಳುಹಿಸದೆ ತನ್ನ ಸಂಕುಚಿತ ರಾಜಕೀಯ ಉದ್ದೇಶಗಳನ್ನು ಪ್ರದರ್ಶಿಸುತ್ತಿದೆ ಎಂದು ಹೇಳಿದರು. ಈಗಾಗಲೇ ತ್ರಿಪುರದ ಸಿಪಿಐ(ಎಂ) ಪಕ್ಷದ ಮೂವರು ಹಿರಿಯ ನಾಯಕರನ್ನು ಉಗ್ರಗಾಮಿಗಳು ಕೊಲೆ ಮಾಡಿದುದನ್ನು ಗಮನಿಸಿಯೂ ಸುಮ್ಮನಿರುವ ಕೇಂದ್ರ ಸರಕಾರದ ನೀತಿಯನ್ನು ಅವರು ಖಂಡಿಸಿದರು. ಆರಂಭದಲ್ಲಿ ಜೆ. ಬಾಲಕೃಷ್ಣ ಶೆಟ್ಟರು ಸ್ವಾಗತಿಸಿದರು ಜಿಲ್ಲಾ ಸಮಿತಿ ಸದಸ್ಯ ವಸಂತ ಆಚಾರಿಯವರು ವಂದಿಸಿದರು.

ಮಂಗಳೂರಿನಲ್ಲಿ ತ್ರಿಪುರಾ ದಿನಾಚರಣೆ

ಒಕ್ಕಲಿಗ ಒಕ್ಕಿದರೂ ಒಡಲಿಗಿಲ್ಲ

ಇದೊಂದು ಗಾದೆ ಮಾತು. ಈ ಮಾತು ಉದಾರೀಕರಣದ ದಿನಗಳಲ್ಲಿ ಇನ್ನಷ್ಟು ಸತ್ಯವಾಗುತ್ತಿದೆ. ಈ ವರ್ಷ ಸುರಿದ ಇಮ್ಮಡಿ ಮಳೆ ಕನ್ನಡನಾಡಿನ ಮಣ್ಣಿನ ಮಕ್ಕಳ ಕನಸುಗಳನ್ನು ಕೊಚ್ಚಿಕೊಂಡು ಹೋದರೆ ಬಿಜೆಪಿ ಸರಕಾರದ ಆಮದು-ರಫ್ತು ನೀತಿ ಬೆಲೆ ಕುಸಿತ ತಂದು ಗಾಯದ ಮೇಲೆ ಬರೆ ಎಳೆದಿದೆ. ಈ ಹಿನ್ನೆಲೆಯಲ್ಲಿ ರೈತರನ್ನು ಸರ್ವದಿಕ್ಕುಗಳಿಂದಲೂ ಕಂಗೆಡಿಸುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ನಡೆಯಲಿರುವ ಡಿಸೆಂಬರ್ 11 ರ ರಾಷ್ಟ್ರೀಯ ಹರತಾಳವನ್ನು ಗ್ರಾಮ ಗ್ರಾಮಗಳಲ್ಲಿ ಯಶಸ್ವಿಗೊಳಿಸಬೇಕಾಗಿದೆ.

ನಿತ್ಯಾನಂದ ಸ್ವಾಮಿ

ಕಳೆದ ಕೆಲವು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ಬಲಿಯಾಗುತ್ತಾ ಬಂದಿದ್ದ ರಾಜ್ಯದ ಒಕ್ಕಲುತನ ಈ ವರ್ಷದ ಮುಂಗಾರಿನ ಹದ ಮಳೆಯಿಂದ ಮತ್ತೆ ಚೇತರಿಸಿಕೊಳ್ಳತೊಡಗಿತ್ತು. ಜೋಳ, ಸಜ್ಜೆ, ಭತ್ತ ಮೊದಲಾದ ಆಹಾರ ಧಾನ್ಯಗಳು,ತೊಗರಿ, ಹೆಸರು, ಉದ್ದು ಮೊದಲಾದ ಮೊದಲಾದ ದ್ವಿದಳ ಧಾನ್ಯಗಳು, ಶೇಂಗಾ, ಎಳ್ಳು, ಸೂರ್ಯಕಾಂತಿ ಮೊದಲಾದ ಎಣ್ಣೆಕಾಳುಗಳು ಅಲ್ಲದೆ ಕರ್ನಾಟಕದಲ್ಲಿ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ಹತ್ತಿಯ ಬೆಳೆಯು ಸಹ ಉತ್ತಮವಾಗಿತ್ತು. ಬಂಪರ್ ಬೆಳೆ ಖಚಿತವೆನಿಸಿತ್ತು. ರೈತರು ಹಿಂದಿನ ಕಷ್ಟಗಳನ್ನು ಮರೆತು ಸಂತೋಷದ ದಿನಗಳನ್ನು ಎದುರುನೋಡುತ್ತಿದ್ದರು. ಆದರೆ ಇನ್ನೇನು ಫಸಲು ಕೈಸೇರುತ್ತದೆ ಎನ್ನುವಷ್ಟರಲ್ಲಿ ಸುರಿಯಲಾರಂಭಿಸಿದ ಮಳೆ ಕನ್ನಡನಾಡಿನ ಮಣ್ಣಿನ ಮಕ್ಕಳ ಕನಸುಗಳನ್ನು ಕೊಚ್ಚಿಕೊಂಡು ಹೋಯಿತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

ಚಂದ್ರಬಾಬು ನಾಯ್ಡುರವರ ಒತ್ತಡಕ್ಕೆ ಮಣಿದ ಪ್ರಧಾನಿ ವಾಜಪೇಯಿಯವರ ದೃಷ್ಟಿ ಅತಿವೃಷ್ಟಿಯಿಂದಾದ ಹಾನಿಯ ಸಮೀಕ್ಷೆ ನಡೆಸಲು ಆಂಧ್ರ ಪ್ರದೇಶಕ್ಕೆ ಬಂದಾಗ ಅಪ್ಪಿತಪ್ಪಿಯೂ ಗಡಿಯಾಚೆ ಇರುವ ಕರ್ನಾಟಕದ ಮೇಲೆ ಬೀಳಲಿಲ್ಲ. ಕರ್ನಾಟಕಕ್ಕೆ ಭೇಟಿ ನೀಡುವ ಸೌಜನ್ಯವನ್ನೂ ಅವರು ತೋರಿಸಲಿಲ್ಲ. ಮಾತ್ರವಲ್ಲ, ಕರ್ನಾಟಕದಲ್ಲಿ ಕೇವಲ ಒಂದೆರಡು ಜಿಲ್ಲೆಗಳಲ್ಲಿ ಮಾತ್ರ ಅತಿವೃಷ್ಟಿಯಿಂದ ಹಾನಿಯಾಗಿದೆ ಎಂದು ಹೈದರಾಬಾದಿನಿಂದಲೇ ಅಪ್ಪಣೆ ಕೊಡಿಸಲು ಮರೆಯಲಿಲ್ಲ.

ಸತತವಾಗಿ ಒಣ ಬರಕ್ಕೆ ತುತ್ತಾಗುತ್ತಿದ್ದ ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು ಜಿಲ್ಲೆಗಳಿಗೆ ಅತಿವೃಷ್ಟಿಯಿಂದ ಅತ್ಯಧಿಕ ಹಾನಿಯಾಗಿದೆ. ಆದರೆ ಈ ಸಲದ ಮಳೆ ಮಹಾಪೂರದ ಅನಾಹುತಕ್ಕೆ ಬಲಿಯಾಗದ ಒಂದು ಜಿಲ್ಲೆಯೂ ಕರ್ನಾಟಕದಲ್ಲಿಲ್ಲ. ಹಾನಿಯ ಪ್ರಮಾಣ ಮಾತ್ರ ಹೆಚ್ಚು ಕಡಿಮೆ ಇರಬಹುದು. ಸುಮಾರು 100 ರಿಂದ 200 ಪಟ್ಟು ಹೆಚ್ಚು ಮಳೆಯಾಗಿದೆ. ಸರ್ಕಾರದ ಅಂಕಿಅಂಶಗಳ ಪ್ರಕಾರ ಸುಮಾರು 7 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಬೆಳೆನಾಶವಾಗಿ ಸುಮಾರು 400 ಕೋಟಿ ರೂಪಾಯಿ ಹಾನಿಯಾಗಿದೆ. ಬಳಕೆಯಾಗಿರುವ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕಗಳ ಬೆಲೆಯನ್ನು ಸೇರಿಸಿದರೆ ಒಟ್ಟುಹಾನಿ ಶೇಕಡ 50 ರಷ್ಟು ಹೆಚ್ಚಾಗುತ್ತದೆ.

ಕಳೆದುಕೊಂಡದ್ದು ಫಸಲು ಮಾತ್ರವಲ್ಲ

ಈ ಸಲದ ಅತಿವೃಷ್ಟಿಯಿಂದ ಉಂಟಾದ ಅನಾಹುತಕ್ಕೆ ಅನೇಕ ಮುಖಗಳಿವೆ. ರೈತರು ಕಳೆದುಕೊಂಡದ್ದು ಫಸಲು ಮಾತ್ರವಲ್ಲ. ಅವರು ಕಷ್ಟಪಟ್ಟು ಸಾಕಿದ ದನಕರುಗಳನ್ನು ಕಳೆದು ಕೊಂಡಿದ್ದಾರೆ. ಮಳೆಗೆ ಸಿಕ್ಕ ಕುರಿಗಳು ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿ, ಪಶು ಔಷಧಾಲಯಗಳಲ್ಲಿ ಔಷಧಗಳು ದೊರೆಯದೆ ಸತ್ತಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಎತ್ತುಗಳು ಒಕ್ಕಲುತನದ ಮೂಲಾಧಾರ. ರೈತನೊಬ್ಬನ ಮನೆಯಲ್ಲಿ ಒಂದು ಎತ್ತು ಸತ್ತು ಹೋಯಿತೆಂದರೆ ಅವನ ಒಕ್ಕಲುತನವೇ ಮುರಿದುಬಿದ್ದಂತೆ. ಪಶುಗಳಿಗೆ ಮಾತ್ರವಲ್ಲ, ಎಡೆಬಿಡದೆ ಸುರಿದ ಮಳೆಯಿಂದ ಮನುಷ್ಯರ ಆರೋಗ್ಯವೂ ಹದಗೆಟ್ಟಿದ್ದು ದುಬಾರಿ ಔಷಧಿಗಳಿಂದ ಕಂಗೆಡುವಂತಾಗಿದೆ.

ಸರ್ಕಾರವೇ ಒಪ್ಪಿಕೊಂಡಿರುವಂತೆ ಮಳೆ ಮಹಾಪೂರದಿಂದಾಗಿ 310 ಜನ ಸತ್ತಿದ್ದಾರೆ. ಒಂದು ವರದಿಯ ಪ್ರಕಾರ ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಮನೆಗಳು ಕುಸಿದು ಬಿದ್ದಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 20 ಗ್ರಾಮಗಳು ನೀರಿನಲ್ಲಿ ಮುಳುಗಿವೆ. ಬೀದರ್ ಜಿಲ್ಲೆಯಲ್ಲಿ ಸುಮಾರು 4000 ಮನೆಗಳು ಕುಸಿದಿವೆ. ರಾಯಚೂರು ಜಿಲ್ಲೆಯಲ್ಲಿ ಸುಮಾರು 12,000 ಮನೆಗಳು ನಾಶವಾಗಿವೆ. ಕೇವಲ ಮಣ್ಣು, ಕಲ್ಲುಗಳಿಂದ ಕಟ್ಟಲಾಗಿರುವ ಈ ಜಿಲ್ಲೆಗಳ ಮನೆಗಳು ಹಿಂದೆಂದೂ ಇಂತಹ ಮಳೆಗೆ ಸಿಕ್ಕಿರಲಿಲ್ಲ. ರಾಯಚೂರು ಜಿಲ್ಲೆಯ ಯಕ್ಲಾಸಪುರ, ಹುಣಶಾಳವಾಡ ಮೊದಲಾದ ಗ್ರಾಮಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನಲ್ಲಿನ ನೆಲ ಕುಸಿತ ಹಾಗೂ ಮನೆ ಗೋಡೆಗಳಲ್ಲಿ ಕಾಣಿಸಲಾರಂಭಿಸಿರುವ ಬಿರುಕುಗಳು ಲಾತೂರಿನ ಭೂಕಂಪವನ್ನು ನೆನಪಿಸುವಂತಾಗಿದೆ.

ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾದವರು ಚಪ್ಪರಗಳಡಿಯಲ್ಲಿ ಪ್ಲಾಸ್ಟಿಕ್ ಹೊದಿಕೆಗಳ ಕೆಳಗೆ ಆಶ್ರಯ ಪಡೆಯುವಂತಾಗಿದೆ. ಸೇತುವೆಗಳು, ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ಕೆರೆಗಳು, ಹೊಲಗಳ ಬದುಗಳು ಒಡೆದು ಹೋಗಿವೆ. ಮೇಲ್ಪದರಿನ ಫಲವತ್ತಾದ ಮಣ್ಣು ಹರಿದುಹೋಗಿ ಒಳಪದರಿನ ಲವಣಾಂಶಗಳು ಹೊರಕ್ಕೆ ಬಂದಿವೆ. ಭೂಮಿ ಸವುಳಾಗಿ ಜವುಳಾಗಿ ಕೃಷಿಗೆ ಅಯೋಗ್ಯವಾಗಿದೆ.

ಅತಿವೃಷ್ಟಿಯ ಅನಾಹುತ ಅಲ್ಲಿಗೇ ಮುಗಿಯಲಿಲ್ಲ. ಹಿಂಗಾರಿ ಬಿತ್ತನೆಗೆ ಧಕ್ಕೆಯಾಗಿದೆ. ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿರುವ ಕಾರಣದಿಂದ, ಸಿಕ್ಕಾಪಟ್ಟೆ ಕಳೆ ಹುಲ್ಲು ಬೆಳೆದಿರುವುದರಿಂದ ಬಿತ್ತನೆಗೆ ಭೂಮಿಯನ್ನು ಸಿದ್ಧಗೊಳಿಸಲಾಗದೆ ಹತ್ತಾರು ಜಿಲ್ಲೆಗಳಲ್ಲಿ ಜೋಳದ ಬಿತ್ತನೆ ಆಗಲಿಲ್ಲ. ಆಗಿರುವಲ್ಲಿ ತುಂಬ ತಡವಾಗಿ ಆಗಿದೆ. ಬಿತ್ತಲು ಬೀಜ ಸಿಗದಂತಾಗಿ ರೈತರು ಪರದಾಡ ಬೇಕಾಯಿತು. ಕಳಪೆ ಬೀಜದ ಪೂರೈಕೆಗೆ ಅವಕಾಶವಾಯಿತು. ಹೈಬ್ರಿಡ್ ಜೋಳದ ಬೀಜಗಳನ್ನೇ ಬಿಳಿ ಜೋಳದ ಬೀಜವೆಂದು ಮಾರಾಟ ಮಾಡಲಾಯಿತು. ರೈತ ನೆಲಕಚ್ಚಿದರೂ ಅವನ ಸುಲಿಗೆ ನಿಲ್ಲಲಿಲ್ಲ. ಹಿಂಗಾರಿ ಬೆಳೆ ಹಾನಿಯಾಗಿ ರೈತರ ಮನೆಗಳಲ್ಲಿ ಧಾನ್ಯ ಸಂಗ್ರಹ ಇಲ್ಲ. ಉಪವಾಸವಿದ್ದು ಹೊಲದ ಕೆಲಸ ಮಾಡಲು ಸಾಧ್ಯವಿಲ್ಲ. ಕೂಲಿ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿರುವ ಕೃಷಿಕೂಲಿಕಾರರ ಜೊತೆಯಲ್ಲಿ ಒಕ್ಕಲುತನವನ್ನು ಕೈ ಬಿಟ್ಟು ರೈತರೂ ಸೇರಿಕೊಳ್ಳುತ್ತಿರುವುದು ಸಾಮಾನ್ಯವಾಗತೊಡಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯ

ಅತಿವೃಷ್ಟಿಯಂತಹ ಅನಾಹುತದ ವಿಷಯದಲ್ಲಿಯೂ ರಾಜಕೀಯ ಮಾಡಲು ಕೇಂದ್ರದ ಬಿಜೆಪಿ ಸರ್ಕಾರ ಹೇಸಲಿಲ್ಲ. ಆಂಧ್ರಪ್ರದೇಶಕ್ಕೆ 200 ಕೋಟಿ ರೂಪಾಯಿಗಳ ಪರಿಹಾರ ಘೋಷಿಸಿದ ಪ್ರಧಾನಿ ಕರ್ನಾಟಕಕ್ಕೆ ಕೇವಲ 50 ಕೋಟಿ ನೀಡಿದ್ದಾರೆ. ಬಿಡುಗಡೆಯಾದ ಹಣದಲ್ಲಿ 35 ಕೋಟಿ ರೂಪಾಯಿಗಳ್ನು ಮುಂಗಡ ಯೋಜನಾ ಸಾಲದ ರೂಪದಲ್ಲಿಯೂ ಉಳಿದ 15 ಕೋಟಿ ರೂಪಾಯಿಗಳನ್ನು ಮಾತ್ರ ಪರಿಹಾರ ಧನದ ರೂಪದಲ್ಲಿ ನೀಡಲಾಗಿದೆ. ಸಾವಿರಾರು ಕೋಟಿ ರೂಪಾಯಿಗಳ ಹಾನಿ ಸಂಭವಿಸಿದ್ದರೂ ರಾಜ್ಯದಿಂದ ಆಯ್ಕೆಯಾಗಿ ಹೋಗಿರುವ ಬಿಜೆಪಿ ಯ ಸಂಸತ್ ಸದಸ್ಯರು ಬಾಯಿಗೆ ಬೀಗ ಹಾಕಿಕೊಂಡಿರುವುದು ಸೋಜಿಗದ ಸಂಗತಿ. ರೈತರ ಬಗ್ಗೆ ಉದ್ದುದ್ದ ಭಾಷಣಗಳನ್ನು ಮಾಡುವ ಸ್ವಯಂ ಘೋಷಿತ ರೈತ ನಾಯಕ ಬಾಬಾಗೌಡ ಪಾಟೀಲರು ಎಲ್ಲಿದ್ದಾರೆ ತಿಳಿಯದಾಗಿದೆ. ಮಸೀದಿ ಕೆಡವಿದ ಖ್ಯಾತಿಯ ಗೃಹಮಂತ್ರಿ ಅಡ್ವಾನಿಯವರು ಬಂದಾಗ ತಮ್ಮ ಶಬ್ದ ಸಂಗ್ರಹದ ಎಲ್ಲ ಶಬ್ದಗಳನ್ನು ಕಮ್ಯುನಿಸ್ಟರ ವಿರುದ್ಧ ಮಿಥ್ಯಾರೋಪ ಮಾಡಲು ವ್ಯಯ ಮಾಡಿದರೇ ಹೊರತು ಪ್ರಕೃತಿವಿಕೋಪದ ದುರಂತಕ್ಕೆ ಸಿಕ್ಕ ರೈತರಿಗಾಗಿ ಹೇಳಲು ಸಹಾನುಭೂತಿಯ ಒಂದು ಶಬ್ದವೂ ಇರಲಿಲ್ಲ. ಮುಖ್ಯಮಂತ್ರಿ ಕುರ್ಚಿಯ ಮೇಲೆ ಕೂಡುವ ಕನಸು ಕಾಣುತ್ತಿರುವ ಯಡಿಯೂರಪ್ಪ ರಾಜ್ಯ ಜನತಾದಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರೇ ಹೊರತು ಕೇಂದ್ರದ ತಮ್ಮ ಬಾಸ್‌ಗಳಿಗೆ ಯಾವ ಪ್ರಾರ್ಥನೆಯನ್ನೂ ಸಲ್ಲಿಸಲಿಲ್ಲ. ರಾಜ್ಯದ ಜೆ.ಹೆಚ್.ಪಟೇಲರ ಸರ್ಕಾರದ ನಿರ್ಲಿಪ್ತ ಧೋರಣೆ ಅಕ್ಷಮ್ಯವಾಗಿದೆ. ರೋಮ್ ನಗರ ಹೊತ್ತಿ ಉರಿಯುತ್ತಿದ್ದಾಗ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದನಂತೆ. ಹಾಗೆ ಕರ್ನಾಟಕದ ಮಣ್ಣಿನ ಮಕ್ಕಳು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾಗ ಸರಕಾರ ನಡೆಸುವ ಚುನಾಯಿತ ಪ್ರತಿನಿಧಿಗಳು ಅಧಿಕಾರದ ಕಿತ್ತಾಟದಲ್ಲಿ ಮುಳುಗಿಹೋಗಿದ್ದರು. ಅತಿವೃಷ್ಟಿ ಅನಾವೃಷ್ಟಿಗಳು ಪ್ರತಿವರ್ಷ ಇದ್ದೇ ಇರುತ್ತವೆ, ನಮ್ಮ ಅಧಿಕಾರ ಮಾತ್ರ ಶಾಶ್ವತ ಅಲ್ಲವಲ್ಲ ಎನ್ನುವಂತಿದೆ ಅವರ ಧೋರಣೆ. ಜನತೆಯ ಆಕ್ರೋಶ ತೀವ್ರಗೊಂಡಾಗ ಕಳೆದ ವರ್ಷ ಅನಾವೃಷ್ಟಿ ನಿಮಿತ್ತ ಕೊಡಬೇಕಾದ ಪರಿಹಾರವನ್ನು ಈ ಸಲ ಕೊಟ್ಟು ರೈತರನ್ನು ಸಮಾಧಾನ ಪಡಿಸಲು ಇವರು ಮಾಡಿದ ಪ್ರಯತ್ನ ಈಗ ಗುಟ್ಟಿನ ವಿಷಯವಾಗಿ ಉಳಿದಿಲ್ಲ.

ರೈತರ ಗೋಳನ್ನು ಅರಿಯಲಿಲ್ಲ

ರಾಜ್ಯದಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳಿಗಾಗಿ 1226 ಕೋಟಿ ರೂಪಾಯಿಗಳಿಗಾಗಿ ಹೊಸ ಪ್ರಸ್ತಾಪವನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದೆ ಎಂದು ತಿಳಿದುಬಂದಿದೆ. ಆದರೆ ಅತಿವೃಷ್ಟಿ ಹಾನಿ ಅಧ್ಯಯನಕ್ಕಾಗಿ ಬಂದಿದ್ದ ಕೇಂದ್ರ ಅಧ್ಯಯನ ತಂಡಕ್ಕೆ ರಾಜ್ಯದ ಪರಿಸ್ಥಿತಿಯನ್ನು ಮನವರಿಕೆ ಮಾಡುವಲ್ಲಿಯೂ ರಾಜ್ಯ ಸರ್ಕಾರ ಆಸಕ್ತಿವಹಿಸಿದ್ದು ಕಾಣಲಿಲ್ಲ. ಕೇಂದ್ರದ ತಂಡದಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದಿರುವುದು ಒಂದೆಡೆಯಾದರೆ ತಂಡದ ಎದುರು ಕರ್ನಾಟಕದ ಪರವಾದ ವಾದವನ್ನು ಸಮರ್ಥವಾಗಿ ಮಂಡಿಸಲು ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಯಾರೂ ಆಸಕ್ತಿ ವಹಿಸದೆ ಹೋಗಿರುವುದು ಅತ್ಯಂತ ಆಕ್ಷೇಪಾರ್ಹ ವಾಗಿದೆ. ಅಧ್ಯಯನ ತಂಡದ ಅಧಿಕಾರಿಗಳು ಸ್ಥಳೀಯ ಅಧಿಕಾರಿ ಗಳೊಂದಿಗೆ ಚರ್ಚೆ ಮಾಡಿ ಹೆದ್ದಾರಿಗಳ ಅಕ್ಕಪಕ್ಕದ ಪರಿಸ್ಥಿತಿಯನ್ನು ವೀಕ್ಷಿಸಿದರೇ ಹೊರತು ಗ್ರಾಮಾಂತರದ ಒಳಹೊಕ್ಕು ರೈತರ ಗೋಳನ್ನು ಅರಿಯಲು ಪ್ರಯತ್ನ ಪಡಲಿಲ್ಲ. ರೈತರೇ ಕಟ್ಟಿಕೊಂಡಿರುವ ರೈತ ಸಂಘಗಳನ್ನು ಸಂಪರ್ಕಿಸಲು ಸಹ ಆಸಕ್ತಿ ವಹಿಸಲಿಲ್ಲ. ರೈತರನ್ನು ಕಂಡು ಪರಿಸ್ಥಿತಿಯನ್ನು ಅಧ್ಯಯನ ಮಾಡುವ ಬದಲು ಅಧ್ಯಯನ ತಂಡದವರು ಬಿಜಾಪುರ ಗೋಳಗುಮ್ಮಟವನ್ನು ನೋಡಿ ಮಜಾ ಮಾಡಿ ಹೋಗಿರುವುದು ಈ ಸುಲಿಗೆ ವ್ಯವಸ್ಥೆಯ ಕ್ರೂರ ವ್ಯಂಗ್ಯವಾಗಿದೆ.

ಕೇರಳ ಮಾದರಿಯಲ್ಲಿ ರೇಷನ್ ಬೇಕು

ಗ್ರಾಮಾಂತರ ಪ್ರದೇಶದಲ್ಲಿ ರೈತರಿಗೆ, ಕೃಷಿ ಕೂಲಿಕಾರರಿಗೆ ತಿನ್ನಲಿಕ್ಕೆ ಆಹಾರ ಧಾನ್ಯಗಳು ಸಿಗುತ್ತಿಲ್ಲ. ಕೇರಳ ಸರ್ಕಾರದ ಮಾದರಿಯಲ್ಲಿ ಅತಿವೃಷ್ಟಿ ಪೀಡಿತ ಜಿಲ್ಲೆಗಳಿಗೆ ಕನಿಷ್ಟ ಒಂದು ತಿಂಗಳಿಗೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಸರ್ಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಒದಗಿಸಲು ಏರ್ಪಾಡು ಮಾಡಬೇಕು. ಪರಿಹಾರ ಕಾಮಗಾರಿ ಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳು ವಂತಾಗಬೇಕು. ಅತಿವೃಷ್ಟಿಯ ಈ ಅನಾಹುತವನ್ನು ರಾಷ್ಟ್ರೀಯ ಅನಾಹುತ ಎಂದು ಘೋಷಿಸುವಂತೆಯೂ ರಾಷ್ಟ್ರೀಯ ಅನಾಹುತ ನಿಧಿಯಿಂದ ಹೆಚ್ಚಿಗೆ ಪರಿಹಾರ ಹಣವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ತರಬೇಕು. ಹಾನಿಗೊಳಗಾದ ರೈತರ ಎಲ್ಲ ಬೆಳೆಗಳಿಗೂ ಪರಿಹಾರ ದೊರೆಯಬೇಕು. ಬೆಳೆ ಹಾನಿ ಅಂದಾಜು ಮಾಡುವ ಕ್ರಮ ವೈಜ್ಞಾನಿಕವಾಗಬೇಕು. ಪ್ರತಿಯೊಂದು ಪಂಚಾಯತಿಯನ್ನು ಒಂದು ಘಟಕವಾಗಿ ಪರಿಗಣಿಸಿ ಹಾನಿ ಅಂದಾಜು ಮಾಡಬೇಕು. ಎಲ್ಲಿಯೋ ಕುಳಿತು ಬೆಲೆಹಾನಿ ಲೆಕ್ಕಹಾಕಬಾರದು. ಗ್ರಾಮದ ರೈತರ ಸಮಕ್ಷಮ ಪರಿಶೀಲನೆ ನಡೆಯಬೇಕು. ಬೆಳೆಹಾನಿ ಅಂದಾಜು ಮಾಡುವಾಗ 5 ವರ್ಷದ ಸರಾಸರಿ ಲೆಕ್ಕ ಹಾಕುವುದನ್ನು ಕೈ ಬಿಟ್ಟು ಆಯಾ ವರ್ಷದ ಹಾನಿಯನ್ನು ವಸ್ತುನಿಷ್ಠವಾಗಿ ಲೆಕ್ಕ ಹಾಕಬೇಕು.

ಬೆಳೆಹಾನಿ ಅಧ್ಯಯನ ತಂಡ ಧಾರವಾಡ ಜಿಲ್ಲೆಗೆ ಬಂದು ಹೋಗಿದ್ದರೂ ಹೊಸ ಹಾವೇರಿ ಜಿಲ್ಲೆಗೆ ಭೇಟಿ ನೀಡಲಿಲ್ಲ. ಸ್ಥಳೀಯ ಚುನಾಯಿತ ಪ್ರತಿನಿಧಿಗಳ ನಿರಾಸಕ್ತಿಯೇ ಇದಕ್ಕೆ ಕಾರಣ. ಹಾವೇರಿ ಜಿಲ್ಲೆಯ ಕೆಲವು ತಾಲೂಕುಗಳು ಮಲೆನಾಡು ಪ್ರದೇಶದ ಅಂಚಿನಲ್ಲಿ ಇವೆ. ಇಲ್ಲಿ ಎರಡು ರೀತಿಯಿಂದ ಬೆಳೆಹಾನಿಯಾಗಿದೆ. ಇಲ್ಲಿ ಮಳೆಯ ನೀರನ್ನು ಅವಲಂಬಿಸಿ ಭತ್ತ ಬೆಳೆಯುತ್ತಾರೆ. ಸಕಾಲದಲ್ಲಿ ಮುಂಗಾರು ಮಳೆಯಾಗದೆ, ಕೆರೆಗಳಲ್ಲಿ ಅವಶ್ಯಕ ನೀರು ಸಂಗ್ರಹವಾಗದೆ ಭತ್ತದ ಬೆಳೆ ತೀವ್ರ ಹಾನಿಗೆ ಒಳಗಾಗಿದೆ. ಅಕ್ಟೋಬರ್ ತಿಂಗಳಲ್ಲಿ ಸುರಿದ ಸತತ ಮಳೆಯಿಂದ ಹತ್ತಿ, ಮೆಣಸಿನಕಾಯಿ ಮೊದಲಾದ ಬೆಳೆಯೂ ಹಾನಿಗೊಳಗಾಗಿದೆ. ದ.ಕನ್ನಡ, ಉ.ಕನ್ನಡದಂತಹ ಕರಾವಳಿ ಜಿಲ್ಲೆಗಳಲ್ಲಿ ಭತ್ತದ ಫಸಲು ಕೊಯಿಲಿಗೆ ಸಿದ್ಧವಾದಾಗ ಸುರಿದ ವಿಪರೀತ ಮಳೆಯಿಂದ ಭತ್ತ ಕೊಳೆತುಹೋಗಿದೆ. ಅಥವಾ ಕೊಚ್ಚಿಕೊಂಡು ಹೋಗಿದೆ. ಶಿವಮೊಗ್ಗ ಮತ್ತಿತರ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗೂ ಹಾನಿಯಾಗಿದೆ. ಎಲ್ಲಾ ಬೆಳೆಗಳನ್ನು ಒಳಗೊಳ್ಳುವ ಸಮಗ್ರ ಬೆಳೆ ವಿಮಾ ಯೋಜನೆಯೊಂದು ಜಾರಿಗೆ ಬರುವುದು ಅವಶ್ಯವಾಗಿದೆ.

ಸರಕಾರದ ಗಮನ ಸೆಳೆಯಲು ಧರಣಿ ಕೂತಿರುವ ರೈತರು

ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಗಾಯದ ಮೇಲೆ ಬರೆ

ನೈಸರ್ಗಿಕ ವಿಕೋಪದಿಂದ ತತ್ತರಿಸಿರುವ ರೈತನಿಗೆ ಮಾರುಕಟ್ಟೆಯಲ್ಲಿಯೂ ರಕ್ಷಣೆಯಿಲ್ಲ. ದಲಾಲರು, ಮಧ್ಯವರ್ತಿಗಳು ರಣಹದ್ದುಗಳಂತೆ ಎರಗುತ್ತಾರೆ. ಕಷ್ಟಪಟ್ಟು ಬೆಳೆದು ತಂದ ಫಸಲು ಮಾರುಕಟ್ಟೆ ಶಕ್ತಿಗಳ ಕೈಗೆ ಸಿಲುಕಿ ಬೆಲೆಕುಸಿತಕ್ಕೆ ಒಳಗಾದಾಗ ರೈತರಿಗೆ ಗಾಯದ ಮೇಲೆ ಬರೆ ಎಳೆದ ಅನುಭವ. ಲಾಭಕೋರ ವರ್ತಕರ ಜೊತೆಯಲ್ಲಿ ಶಾಮೀಲಾಗಿರುವ ಭಾರತ ಸರ್ಕಾರ ಮತ್ತು ಅದರ ಹೊಸ ಆಮದು ರಫ್ತು ನೀತಿ ರೈತರನ್ನು ದಿವಾಳಿಯೆಬ್ಬಿಸುತ್ತಿದೆ. ಉದಾರೀಕರಣದ ಹೆಸರಿನಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತದೆ. ಜಾಗತಿಕ ಮಾರುಕಟ್ಟೆಯ ಲಾಭವನ್ನು ನಮ್ಮ ರೈತರಿಗೆ ಒದಗಿಸುವುದು ಇದರ ಉದ್ದೇಶ ಎಂದು ಸರ್ಕಾರ ಹೇಳುತ್ತಿದೆ. ರಫ್ತು ವ್ಯಾಪಾರದಲ್ಲಿ ಗುತ್ತಿಗೆ ಹೊಂದಿರುವ ಮಧ್ಯವರ್ತಿಗಳು ಇದರ ಲಾಭ ಪಡೆಯಬಹುದೇ ಹೊರತು ನಮ್ಮ ರೈತರಲ್ಲ. ವಿದೇಶಗಳಿಗೆ ರಫ್ತು ಮಾಡುವ ಹೆಸರಿನಲ್ಲಿ ಆಂತರಿಕ ಮಾರುಕಟ್ಟೆಯನ್ನು ಕಡೆಗಣಿಸಲಾಗುತ್ತಿದೆ ಮಾತ್ರವಲ್ಲ ಅಕ್ರಮ ದಾಸ್ತಾನುದಾರರಿಗೆ ಕೃತಕ ಕೊರತೆ ನಿರ್ಮಿಸಿ ಲಾಭ ಗಳಿಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಈರುಳ್ಳಿ ಕೆ.ಜಿ.ಒಂದಕ್ಕೆ 60 ರೂ. ಆಗಿರಬಹುದು. ಆದರೆ ಈರುಳ್ಳಿ ಬೆಳೆದ ರೈತರಿಗೆ 6 ರೂ. ಸಹ ಸಿಗಲಿಲ್ಲ.

ಹಿಂದಿನ ಕಾಂಗ್ರೆಸ್ ಸರ್ಕಾರ ಜಾಗತಿಕ ವಾಣಿಜ್ಯ ಸಂಸ್ಥೆಯ ಒಪ್ಪಂದಕ್ಕೆ ಸಹಿ ಹಾಕಿತ್ತು. ಒಪ್ಪಂದದ ಷರತ್ತುಗಳಿಗೆ ಅನುಗುಣವಾಗಿ ವಿದೇಶಗಳಿಂದ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲೇಬೇಕು. ಬಿಜೆಪಿ ಸರ್ಕಾರ ತನ್ನ ಹೊಸ ಆಮದು-ರಫ್ತು ನೀತಿಯ ಮೂಲಕ ಇದಕ್ಕೆ ದಾರಿ ಸುಗಮಗೊಳಿಸಿದೆ. ಅವಶ್ಯಕತೆ ಇಲ್ಲದಿದ್ದರೂ ಖಾದ್ಯ ತೈಲಗಳು, ಸಕ್ಕರೆ, ರೇಷ್ಮೆ, ತೊಗರಿ ಮೊದಲಾದವುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ವಿದೇಶಗಳಿಂದ ಆಮದಾಗುತ್ತಿರುವ ಖಾದ್ಯ ತೈಲಗಳ ಹೆಸರಿನಲ್ಲಿ ಇಲ್ಲಿಯ ಮಾರುಕಟ್ಟೆ ಶಕ್ತಿಗಳು ರೈತರ ಲೂಟಿ ಮಾಡುತ್ತಾರೆ. ಮಾರುಕಟ್ಟೆಯಲ್ಲಿ ಶೇಂಗಾ ಎಣ್ಣೆಯ ಬೆಲೆ ಏರುತ್ತದೆ. ಆದರೆ ರೈತರು ಬೆಳೆದು ತಂದ ಶೇಂಗಾದ ಬೆಲೆ ಕುಸಿಯುತ್ತದೆ. ತೊಗರಿ ಬೇಳೆ ಕ್ವಿಂಟಾಲಿಗೆ ರೂ. 12,000 ಮಾರಾಟವಾಗುತ್ತದೆ. ಆದರೆ ತೊಗರಿ ಬೆಳೆದ ರೈತನಿಗೆ ಕ್ವಿಂಟಾಲಿಗೆ ಹೆಚ್ಚೆಂದರೆ 1000 ರೂ. ಸಿಗುತ್ತದೆ. ಭತ್ತ ಬೆಳೆಯುವ ರೈತನ ಪರಿಸ್ಥಿತಿಯೂ ಇದರಿಂದ ಬೇರೆಯಲ್ಲ. ಕೃಷಿ ಫಸಲಿನ ಬೆಲೆಯನ್ನು ಹೀಗೆ ಕೃತಕವಾಗಿ ಏರುಪೇರು ಮಾಡುವುದನ್ನು ತಡೆಯಲು ಸರ್ಕಾರ ಮಧ್ಯಪ್ರವೇಶ ಮಾಡುವ ಬದಲು ಶಿರಾದಲ್ಲಿ ನಡೆದಂತೆ ಗುಂಡಿಕ್ಕಿ ಕೊಲ್ಲುತ್ತದೆ. ದೇಶಕ್ಕೆ ಅನ್ನ ನೀಡಿದ ತಪ್ಪಿಗೆ ರೈತನಿಗೆ ದಕ್ಕಿದ್ದು ಹತ್ಯೆ ಅಥವಾ ಆತ್ಮಹತ್ಯೆ. 'ಒಕ್ಕಲಿಗ ಒಕ್ಕಿದರೂ ಒಡಲಿಗಿಲ್ಲ' ಎಂಬ ಗಾದೆ ಮಾತು ಸತ್ಯವಾಗುತ್ತಿದೆ.

ಭಾರತ ಸರ್ಕಾರ ಮುಕ್ತ ಮಾರುಕಟ್ಟೆಯ ನೀತಿಯನ್ನು ಬದಲಾಯಿಸದಿದ್ದರೆ ದೇಶದ ರೈತರಿಗೆ ಉಳಿಗಾಲವಿಲ್ಲ. ಕೃಷಿರಂಗ ಸರ್ವನಾಶ ಆಗುವುದರಲ್ಲಿ ಸಂಶಯವಿಲ್ಲ. ಆಹಾರ ಧಾನ್ಯಗಳಿಗಾಗಿ ಪರಾವಲಂಬನೆ ಬೆಳೆದು ನಮ್ಮ ದೇಶಕ್ಕೆ ಸೋಮಾಲಿಯಾದಂತಹ ಗತಿ ಬರಲಿಕ್ಕಿಲ್ಲ ಎಂದು ಹೇಳಲಾಗದು. ರೈತರು ಈ ಅಪಾಯವನ್ನು ಮನಗಾಣಬೇಕು. ಭಾರತ ಸರ್ಕಾರದ ರೈತ ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡಲು ಮುಂದೆ ಬರಬೇಕಾಗಿದೆ. ಭಾರತ ಸರ್ಕಾರದ ಜನ ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ನಡೆಯಲಿರುವ ಡಿಸೆಂಬರ್ 11 ರ ರಾಷ್ಟ್ರೀಯ ಹರತಾಳವನ್ನು ಗ್ರಾಮ ಗ್ರಾಮಗಳಲ್ಲಿ ಯಶಸ್ವಿಗೊಳಿಸಬೇಕಾಗಿದೆ.

ಡಿಸೆಂಬರ್ 11: ಪರ್ಯಾಯ ನೀತಿಗಳಿಗಾಗಿ ಹೋರಾಟ

ನವೆಂಬರ್ 16 ರ ರಾಜ್ಯಮಟ್ಟದ ರ್‍ಯಾಲಿಯ ಸಂದರ್ಭದಲ್ಲಿ ರಾಷ್ಟ್ರೀಯ ವೇದಿಕೆಯ ಐದು ಪ್ರತಿನಿಧಿಗಳು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿಯನ್ನು ಕೊಟ್ಟರು. ರಾಜ್ಯಪಾಲರು ಈ ಪ್ರತಿನಿಧಿಗಳೊಡನೆ ಮಾತಾಡುತ್ತಾ ಈಗಿನ ಪರಿಸ್ಥಿತಿಯ ಬಗ್ಗೆ ಖೇದ ವ್ಯಕ್ತಪಡಿಸುತ್ತಾ ಈ ದೇಶಕ್ಕೆ ಭವಿಷ್ಯವಿದೆಯೇ ಎಂದು ಕೇಳಿದರು. ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಾ ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅನಂತಸುಬ್ಬರಾವ್ ಇದನ್ನು ಹೇಳುತ್ತಾ ನಾವು ಪರ್ಯಾಯ ಕಾರ್ಯಕ್ರಮವನ್ನು ದೇಶದ ಮುಂದಿಟ್ಟಿದ್ದೇವೆ ಎಂದರು. ವಾಜಪೇಯಿ ಅಧಿಕಾರಕ್ಕೆ ಬಂದರೆ ಸುಭಿಕ್ಷ ಬರುವುದೆಂಬ ಭ್ರಮೆ ಹೋಗಿದೆ. ವ್ಯಕ್ತಿ ಮುಖ್ಯವಲ್ಲ, ನೀತಿಗಳು ಮುಖ್ಯ ಎಂದು ಇದರಿಂದ ಅರಿವಾಗುತ್ತಿದೆ ಎಂದ ಅವರು ಸಮಾವೇಶಗಳು, ಜಾಥಾಗಳು ಪರ್ಯಾಯ ನೀತಿಗಳ ಸಂದೇಶವನ್ನು ತಲುಪಿಸಿವೆ ಎಂದು ಹೇಳಿದರು. ಖಾಸಗೀಕರಣ ಎಂದರೆ ಹೆಚ್ಚಿನ ಬೆಲೆಯೇರಿಕೆ, ಹೆಚ್ಚಿನ ಶೋಷಣೆ ಎಂದೇ ಅರ್ಥ. ರಾಜ್ಯದಲ್ಲಿ ಅಂಗನವಾಡಿ ಕಾರ್ಮಿಕರ ಹೋರಾಟ, ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕಾರ್ಮಿಕ ಹಕ್ಕುಗಳಿಗಾಗಿ ಹೋರಾಟ, ಬಾಗೂರು-ನವಿಲೆ ಹೋರಾಟವನ್ನು ಪ್ರಸ್ತಾಪಿಸಿದ ಅವರು ಪರಿಹಾರದ ಬದಲು ಪೋಲೀಸರನ್ನು ಕಳಿಸುವ ನೀತಿಯನ್ನು ಈಗಲಾದರೂ ಬದಲಿಸಿಕೊಳ್ಳಿ ಎಂದು ಎಚ್ಚರಿಸಿದರು. ಡಿಸೆಂಬರ್ 11 ರಂದು ಇಡೀ ದೇಶ ಎದ್ದು ನಿಲ್ಲಬೇಕು ಎಂದು ಅವರು ಕರೆ ನೀಡಿದರು.

ಎ.ಐ.ಟಿ.ಯು.ಸಿ.ಯ ಹಾಗೂ ಸಾರ್ವಜನಿಕ ವಲಯದ ಕಾರ್ಮಿಕರ ಇನ್ನೊಬ್ಬ ಮುಖಂಡ ಮಹದೇವನ್‌ರವರು ಮಾತನಾಡುತ್ತಾ ಡಿಸೆಂಬರ್ 11 ರ ಮುಷ್ಕರ ಕೊನೆಯಲ್ಲ ಪ್ರಾರಂಭ ಎಂದರು. ಬಿಜೆಪಿ ಸರಕಾರ ಪೋಖ್ರಾನ್‌ನಲ್ಲಿ ಬಾಂಬ್ ಸ್ಫೋಟಿಸಿದ್ದಷ್ಟೇ ಅಲ್ಲ ಆರ್ಥಿಕ ರಂಗದಲ್ಲೂ ಬಾಂಬ್ ಹಾಕುತ್ತಿದೆ ಎಂದು ಗೇಲಿ ಮಾಡಿದ ಅವರು ಈ ನೀತಿಗಳಿಂದಾಗಿ ಏಶ್ಯನ್ ಹುಲಿಗಳು ಹೋಗಿ ಇಲಿಗಳಾಗಿರುವುದನ್ನು ಅವರು ನೆನಪಿಸಿದರು. ಈ ಹಿನ್ನೆಲೆಯಲ್ಲಿ ಡಿಸೆಂಬರ್ 11ರ ಕಾರ್ಯಾಚರಣೆಯ ಮಹತ್ವವನ್ನು ಒತ್ತಿ ಹೇಳಿದರು.

ಯು.ಟಿ.ಯು.ಸಿ. (ಲೆನಿನ್ ಸರಣಿ) ಯ ರಾಧಾಕೃಷ್ಣರವರು 1991 ರಿಂದ ಬಂದಿರುವ ನೀತಿಗಳ ಪರಿಣಾಮಗಳು ಇಂದು ಉಲ್ಬಣಗೊಳ್ಳುತ್ತಿವೆ. ಈ ನೀತಿಗಳು ಏಕಸ್ವಾಮ್ಯ ಬಂಡವಾಳಗಾರರ ಪರವಾಗಿರುವಂತವುಗಳು ಎಂದು ಎಚ್ಚರಿಸಿದರು. ಬಿಜೆಪಿ ಕೋಮುವಾದಿ, ದುರಾಕ್ರಮಣವಾದಿ, ಫ್ಯಾಸಿಸ್ಟ್ ವಾದಿ ಎಂದ ಅವರು ಇದನ್ನೆಲ್ಲಾ ಎದುರಿಸಲು ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧಾರದಲ್ಲಿ ಐಕ್ಯ ಹೋರಾಟ ನಡೆಯಬೇಕು ಎಂದರು.

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಕಾರಂತರವರು ಡಿಸೆಂಬರ್ 11 ರ ಮುಷ್ಕರವನ್ನು ಯಶಸ್ಸುಗೊಳಿಸುವ ಅಗತ್ಯದ ಬಗ್ಗೆ ಹೇಳುತ್ತಾ ಬ್ಯಾಂಕಿಂಗ್ ಉದ್ದಿಮೆಯ ಅನುಭವಗಳನ್ನು ಹೇಳಿದರು. ಬ್ಯಾಂಕುಗಳಿಂದ ಅಂಬಾನಿ, ಮಫತ್ ಲಾಲ್, ಟಾಟಾ, ಬಿರ್ಲಾಗಳಂತವರಿಂದು ಮಾಡಿದ ಸಾಲದ ಬಾಕಿ 45643 ಕೋಟಿ ರೂ. ಈ ಹಣವನ್ನು ನುಂಗಿ ಹಾಕಿದವರನ್ನೆಲ್ಲಾ ಜೈಲಿಗೆ ಹಾಕಿ ಎನ್ನುತ್ತೇವೆ ನಾವು, ಸರಕಾರವೇಕೆ ಹೀಗೆ ಮಾಡುತ್ತಿಲ್ಲ ಎಂದವರು ಪ್ರಶ್ನಿಸಿದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಪರವಾಗಿ ಮಾತನಾಡಿದ ಎಂ.ಚಂದನ್ ವಿಮಾ ರಂಗದಲ್ಲಿ ಖಾಸಗೀಕರಣದ ಪ್ರಯತ್ನಗಳನ್ನು ಖಂಡಿಸುತ್ತಾ ಚೆನ್ನಾಗಿ ನಡೆಯುವಂತಹ ಉದ್ದಿಮೆಗಳನ್ನು ಸಾಯಿಸುವಂತದ್ದು, ಸರಕಾರ ತೊಡಗಿಸಿದ ಕೇವಲ 5 ಕೋಟಿ ರೂ. ಬಂಡವಾಳಕ್ಕೆ ಈ ವರ್ಷವೇ 197 ಕೋಟಿ ರೂ. ಡಿವಿಡೆಂಡ್ ನೀಡುವಂತಹ ಉದ್ದಿಮೆಯನ್ನು ಖಾಸಗೀಕರಿಸುವಂತದ್ದು ಈ ಉದಾರೀಕರಣ ನೀತಿ ಎಂದರು.

ಬಿಜೆಪಿ ಮಹಿಳಾ-ವಿರೋಧಿ ಎಂದ ಎ.ಐ.ಎಂ.ಎಸ್.ಎಸ್. ನ ನಾಗಮ್ಮನವರು ಟಿ.ವಿ.ಗಳು ಅಶ್ಲೀಲತೆಯನ್ನು ಸಾರುತ್ತಿರುವ ಹಿನ್ನೆಲೆಯಲ್ಲಿ ಸಂಸ್ಕೃತಿಯ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ ಎಂದರು. ಆದ್ದರಿಂದಾಗಿ ಭೌಗೋಳಿಕರಣ, ಕೋಮುವಾದವನ್ನು ತಾವು ವಿರೋಧಿಸುವುದಾಗಿ ಅವರು ಒತ್ತಿ ಹೇಳಿದರು.

ಎಐಡಿವೈಓ ದ ಮಂಜುನಾಥ್‌ರವರು ಕರ್ನಾಟಕದಲ್ಲಿ ಹೋರಾಟದ ಮೂಲಕ ಈ ಚಳುವಳಿ ಬಂದಿದ್ದು, ಶೋಷಕ ಬಂಡವಾಳದ ವಿರುದ್ಧ, ಅದರ ಪಿತೂರಿಯ ವಿರುದ್ಧ ಜನಗಳನ್ನು ಅಣಿನೆರೆಸಬೇಕು ಎಂದರು. ಈ ಹೋರಾಟ ಒಂದು ಪಕ್ಷದ ಅಥವಾ ಸರ್ಕಾರದ ವಿರುದ್ಧ ಅಲ್ಲ, ಬದಲಿಗೆ ಶೋಷಣೆಯ ವಿರುದ್ಧ - ಪರಿವರ್ತನೆಯ ದಾರಿಯತ್ತ ಯುವಜನರನ್ನು ಅಣಿನೆರೆಸಬೇಕು ಎಂದರು. ಎಐಡಿಎಸ್‌ಓ ನ ಉಮಾರವರು ಇಂದು ಶಿಕ್ಷಣದ ವ್ಯಾಪಾರ ಘೋರ ರೂಪ ತಾಳಿದೆ ಎಂದರು.

ಉದಾರೀಕರಣ ಹೊಸ-ಹೊಸ ವಸ್ತುಗಳನ್ನು ಕೊಡುತ್ತದಂತೆ. ಆದರೆ ನಮ್ಮ ಜನಗಳಿಗೆ ಮೊದಲು ಬೇಕಾದ್ದು ಊಟ-ಬಟ್ಟೆ. ಅದು ಸಿಗದೆ ತಾಯಿಯೇ ಮಗುವನ್ನು ಕೆರೆಗೆಸೆಯುವ ಪರಿಸ್ಥಿತಿ ಉಂಟಾಗಿದೆ ಎನ್ನುತ್ತಾ ಇವುಗಳ ನಿವಾರಣೆಗೆ ಹೋರಾಟದ ಅಗತ್ಯವನ್ನು ವಿವರಿಸಿದರು. ಎಐಎಸ್‌ಎಫ್‌ನ ಉಜ್ವಲ್ ರಾಯ್ ಬಿಜೆಪಿ ಆಳ್ವಿಕೆಯ ಉತ್ತರ ಪ್ರದೇಶದ ಸ್ಥಿತಿಯ ಬಗ್ಗೆ ಹೇಳಿದರು.

ನಮ್ಮ ಸಮಾಜದ ವಿವಿಧ ಜನಸಮೂಹಗಳು ಡಿಸೆಂಬರ್ 11 ರ ಮುಷ್ಕರಕ್ಕೆ ನೀಡಿರುವ ಮಹತ್ವ ಈ ಭಾಷಣಗಳಲ್ಲಿ ಎದ್ದು ಕಾಣುತ್ತಿತ್ತು. ರ್‍ಯಾಲಿಯ ಕೊನೆಯಲ್ಲಿ ಹಾಡಿದ 'ಗೆಲುವು ನಮ್ಮದು' ನವೆಂಬರ್ 16 ರ 'ಬೆಂಗಳೂರು ಚಲೋ' ತುಂಬಿದ ಹೊಸ ಉತ್ಸಾಹದ ಸಂಕೇತವಾಗಿತ್ತು. ಇದಕ್ಕೆ ಮೊದಲು ಎಐಟಿಯುಸಿಯ ನಾಗರಾಜ್‌ರವರು ವಂದನಾರ್ಪಣೆ ಮಾಡಿದರು. ಆರಂಭದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಸ್ವಾಗತ ಕೋರಿದರು. **ಶಿರಾದಲ್ಲಿ ಪೋಲೀಸ್ ಗುಂಡುಗಳಿಗೆ ಬಲಿಯಾದ ರೈತರ ನೆನಪಿನಲ್ಲಿ ಎರಡು ನಿಮಿಷ ಮೌನವನ್ನು ಇಡೀ ಸಭೆ ಆಚರಿಸಿತು.**

ಮೇರೆಗೆ ಬೆಂಗಳೂರಿಗೆ ಧಾವಿಸಿ ಬಂದ ಈ ಜನಪ್ರವಾಹವನ್ನು ಕಂಡಾಗ ನಮ್ಮ ಆಳರಸರಿಗೆ ಸ್ಪಷ್ಟವಾಗಿರಬೇಕು. ರಾಯಚೂರಿನ ರೈತರು, ಬಾಗೇಪಲ್ಲಿಯ ಶ್ರಮಜೀವಿಗಳಂತೂ ಪೋಲೀಸರೊಂದಿಗೆ ಸೆಣಸಿಯೇ ಬೆಂಗಳೂರಿಗೆ ಬರಬೇಕಾಯಿತು.

ಜನವಾದಿ ಮಹಿಳಾ ಸಂಘಟನೆಯ ನೀಲಾರವರು ಉದ್ಗರಿಸಿದಂತೆ ಜಗದಗಲ, ಮುಗಿಲಗಲ ಎಲ್ಲಿ ನೋಡಿದರಲ್ಲಿ ಹೋರಾಟದ ಗಂಟೆ, ಪ್ರತಿಭಟನೆಯ ಗಂಟೆ, ಎಚ್ಚರಿಕೆಯ ಗಂಟೆ ಮೊಳಗಿರುವುದರ ಪ್ರತೀಕವಾಗಿತ್ತು ನವೆಂಬರ್ 16 ರಂದು ಬೆಂಗಳೂರು ಕಂಡ ಬೃಹತ್ ಮೆರವಣಿಗೆ. ಇತ್ತೀಚಿನ ವರ್ಷಗಳಲ್ಲಿ ಇಷ್ಟು ದೊಡ್ಡ ಮೆರವಣಿಗೆಯನ್ನು ತಾವು ಕಂಡಿರಲಿಲ್ಲ ಎಂದರು ನಗರದ ಹಲವಾರು ಪ್ರಜಾಪ್ರಭುತ್ವವಾದಿ ಹೋರಾಟಗಾರರು. ಇವರೆಲ್ಲಾ ರಾಜ್ಯದ ಒಬ್ಬ ಮಂತ್ರಿ ಉಡಾಫೆಯಿಂದ ಹೇಳಿದಂತೆ ಬೆಂಗಳೂರು ನೋಡಲು ಬಂದಿರಲಿಲ್ಲ. ಡಿವೈಎಫ್‌ಐ ಮುಖಂಡ ಗುರುಶಾಂತ್‌ರವರು ಹೇಳಿದಂತೆ ಹೋರಾಟದ ಗರ್ಜನೆಯಿಂದ ಇಂತಹ ಉಡಾಫೆ ಮಂತ್ರಿಗಳ ಮಂಪರನ್ನು ಹರಿಸಲು, ಹೋರಾಟವನ್ನು ತೀವ್ರಗೊಳಿಸಲು ಬಂದಿದ್ದರು. ಡಿಸೆಂಬರ್ 11 ರ ಬೃಹತ್ ಐತಿಹಾಸಿಕ ಮುಷ್ಕರದ ನೋಟೀಸು ಕೊಡಲು ಬಂದಿದ್ದರು.

ಹೋರಾಟದ [illegible] ಅಲೆ ಅಲೆಯಾಗಿ ಬಂದ....

ಪುಟ 1 ರಿಂದ

ಎಂಟು ವರ್ಷಗಳಿಂದ ಕೆಲವೊಮ್ಮೆ ಬಿಡಿ-ಬಿಡಿಯಾಗಿ, ಕೆಲವೊಮ್ಮೆ ಒಟ್ಟಾಗಿ ನಡೆಸಿಕೊಂಡು ಬಂದ ಹೋರಾಟ, ಎಲ್ಲಾ ಜನಸಮೂಹಗಳ ಸಂಕಟಗಳಿಗೆ ನೈಜ ಪರಿಹಾರ ನೀಡಿ ದೇಶವನ್ನು ನಿಜವಾಗಿಯೂ ಪ್ರಗತಿಯತ್ತ 21ನೇ ಶತಮಾನದತ್ತ ಸಾಗಿಸಬಲ್ಲ ಪರ್ಯಾಯ ನೀತಿಗಳಿಗಾಗಿ ನಡೆದಿರುವ ಹೋರಾಟ ಹೊಸ ಮಜಲನ್ನು ತಲುಪಿದ್ದು ಎದ್ದು ಕಾಣುತ್ತಿತ್ತು; ಡಿಸೆಂಬರ್ 11 ನ್ನು ನಿಜವಾದ ಜನತಾ ಪ್ರಜಾಪ್ರಭುತ್ವದತ್ತ ಸಾಗುವ ದಾರಿಯಲ್ಲಿನ ಮೈಲಿಗಲ್ಲಾಗಿಸುವ ಛಲ ಎದ್ದು ಕಾಣುತ್ತಿತ್ತು.

ಕಳೆದ ಒಂದು ತಿಂಗಳಿಂದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರ್ನಾಟಕ ಘಟಕದ ನೇತೃತ್ವದಲ್ಲಿ ರಾಜ್ಯದ ಎಲ್ಲೆಡೆ ಮೊದಲು ಸಮಾವೇಶಗಳ ಮೂಲಕ, ನಂತರ ಜಾಥಾಗಳ ಮೂಲಕ ಈ ಹೋರಾಟದ ಸಂದೇಶವನ್ನು, ಪರ್ಯಾಯ ನೀತಿಗಳ ಈ ಸಂದೇಶವನ್ನು ಬಿತ್ತರಿಸುತ್ತಾ ಬಹಳಷ್ಟು ಯಶಸ್ವಿಯಾದದ್ದು ವೇದಿಕೆಯ ಕರೆಯ

ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಜ್ಜಾಗುತ್ತಿರುವ ರಂಗ

ದೇಶದೊಳಗೆ
ವಿಶ್ವ

ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಅನುಸರಿಸುತ್ತಿರುವ ಅನಾಹುತಕಾರಿ ಆರ್ಥಿಕ ನೀತಿಗಳು ಮತ್ತು ಸರಕಾರದ ಕೃಪಾಶ್ರಯದಲ್ಲಿ ಸಂಘ ಪರಿವಾರ ಹರಿಯ ಬಿಟ್ಟಿರುವ ಕೋಮುವಾದದ ವಿಷಾನಿಲದ ವಿರುದ್ಧ ದೇಶಾದ್ಯಾಂತ ಜನಾಂದೋಲನ ಮೇಲೆದ್ದು ಬರುತ್ತಿದೆ. ಸಭೆ, ಸಮಾವೇಶ, ರ್‍ಯಾಲಿಗಳು ನಡೆಯುತ್ತಿವೆ. ಎಂಟು ಕೋಟಿ ಜನರನ್ನು ಪ್ರತಿನಿಧಿಸುವ 50 ಕ್ಕೂ ಹೆಚ್ಚು ಸಮೂಹಿಕ ಸಂಘಟನೆಗಳನ್ನೊಳಗೊಂಡ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (ಎನ್.ಪಿ.ಎಂ.ಓ) ಇದಕ್ಕೆ ನೇತೃತ್ವ ನೀಡುತ್ತಿದೆ. ಎನ್.ಪಿ.ಎಂ.ಓ ನಾಯಕತ್ವದಲ್ಲಿ ನಾನಾ ರಾಜ್ಯಗಳಲ್ಲಿ ನಡೆದಿರುವ ಚಟುವಟಿಕೆಗಳ ಸಂಕ್ಷಿಪ್ತ ವರದಿ ಇಲ್ಲಿದೆ.

ಉತ್ತರ ಪ್ರದೇಶ

ಡಿಸೆಂಬರ್ 11 ರ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ತಯಾರಿಯಾಗಿ ನವೆಂಬರ್ 30 ರಂದು ರಾಜ್ಯಮಟ್ಟದ ಬೃಹತ್ ರ್‍ಯಾಲಿಯನ್ನು ನಡೆಸಲು ಎನ್.ಪಿ.ಎಂ.ಓ ಉತ್ತರ ಪ್ರದೇಶ ಘಟಕ ಕರೆ ನೀಡಿದೆ. ಅಕ್ಟೋಬರ್ 27 ರಂದು ಲಕ್ನೋದಲ್ಲಿ ನಡೆದ ರಾಜ್ಯ ಸಮಾ ವೇಶ ಈ ನಿರ್ಧಾರ ತೆಗೆದುಕೊಂಡಿತು.

20 ಸಾಮೂಹಿಕ ಸಂಘಟನೆಗಳ ಒಂದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಸಾರ್ವಜನಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಜನಜಾಗೃತಿ ಮೂಡಿಸಲು ಕಾರ್ಮಿಕರ ಸಭೆಗಳು ವಿಚಾರ ಗೋಷ್ಠಿಗಳು, ಸಾರ್ವಜನಿಕ ಸಭೆಗಳು, ಮೆರವಣಿಗೆಗಳು, ಪಾದಯಾತ್ರೆ ಮೊದಲಾದವುಗಳನ್ನು ಸಂಘಟಿಸಲು ರಾಜ್ಯ ಸಮಾವೇಶ ನಿರ್ಧರಿಸಿತು.

ಸುಭಾಷಿಣಿ ಅಲಿ, ರಬಿ ಮಿಶ್ರಾ, ಅರವಿಂದ ಕುಮಾರ್, ಮಹಮದ್ ಷಫಿ, ಪ್ರತಾಪ ಕುಮಾರ್ ಟಂಡನ್, ದೇನಾನಾಥ ಸಿಂಗ್, ಅಂಬಿಕಾ ಪ್ರಸಾದ್ ಮಿಶ್ರಾ, ಪ್ರಶಾಂತ ತ್ರಿವೇದಿ, ಸಾಧುಶರಣ, ಲಲ್ಲನ್ ಪಾಂಡೆ, ಅಮರಸಿಂಗ್ ಖುಶವಾಹ ಮೊದಲಾದವರು ಮಾತನಾಡಿದರು.

ರಾಜ್ಯದ ಕಲ್ಯಾಣ್‌ಸಿಂಗ್ ಸರಕಾರ ಬಂಡವಾಳಗಾರರು ಭೂಮಾಲಿಕರು ಮತ್ತು ವ್ಯಾಪಾರಿಗಳ ಕೂಟದ ಒತ್ತಡಕ್ಕೆ ಒಳಗಾಗಿ ಕಾರ್ಯನಿವಹಿಸುತ್ತಿದೆ ಎಂದು ಭಾಷಣಕಾರರು ಹೇಳಿದರು.

ರಾಜ್ಯದಲ್ಲಿ ಕೈಗಾರಿಕೆ ರೋಗಗ್ರಸ್ತತೆ ಹೆಚ್ಚಿ ಅನೇಕ ಕಾರ್ಖಾನೆಗಳು ಮುಚ್ಚುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

ಹಿಮಾಚಲ ಪ್ರದೇಶ

ಪುಟ್ಟ ರಾಜ್ಯ ಹಿಮಾಚಲ ಪ್ರದೇಶ ರಾಜಧಾನಿ ಶಿಮ್ಲಾದಲ್ಲಿ ಅಕ್ಟೋಬರ್ 29 ರಂದು ನಡೆದ ರಾಜ್ಯ ಸಮಾವೇಶದಲ್ಲಿ ಸಿಐಟಿಯು ಐಟಕ್ ಕಿಸಾನ್ ಸಭಾಗಳು, ಎಸ್‌ಎಫ್‌ಐ, ಎಐಎಸ್‌ಎಫ್, ಡಿ.ವೈ.ಎಫ್.ಐ., ಬಿ.ಇ.ಎಫ್.ಐ, ಎ.ಐ.ಬಿ.ಇ.ಎ. ಕೇಂದ್ರ ಸರಕಾರಿ ನೌಕರರ ಸಮನ್ವಯ ಸಮಿತಿ, ವಿಮೆ ಹಾಗೂ ಅಂಚೆ ನೌಕರರನ್ನು ಪ್ರತಿನಿಧಿಸುವ ಎಸ್.ಬಿ.ಐ.ಇ.ಎ. ನ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ. ಪಂಧೆ, ಐಟಕ್ ಪ್ರಧಾನ ಕಾರ್ಯದರ್ಶಿ ಕೆ.ಎಲ್. ಮಹೇಂದ್ರ, ಮತ್ತು ಸಿಐಟಿಯು ಪಂಜಾಬ್ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಸಮಾವೇಶದ ಪ್ರಮುಖ ಭಾಷಣಕಾರರಾಗಿದ್ದರು.

ಬಹುರಾಷ್ಟ್ರೀಯ ಕಂಪನಿಗಳು ಮತ್ತು ಖಾಸಗೀಕರಣ ದೇಶದ ಆರ್ಥಿಕತೆ ಮೇಲೆ ಎಸಗುತ್ತಿರುವ ಭಾರೀ ಆಕ್ರಮಣಕಾರಿ ದುಷ್ಪರಿಣಾಮಗಳ ಬಗ್ಗೆ ಡಾ॥ ಪಂಧೆ ವಿವರಿಸಿದರು. ಜನವಿರೋಧಿ ಆರ್ಥಿಕ ನೀತಿಗಳನ್ನು ಬದಲಾಯಿಸಲು ಮತ್ತು ಸರಕಾರದ ದುರಾಡಳಿತವನ್ನು ಕೊನೆಗೊಳಿಸಲು ದುಡಿಯುವ ಜನರು ಮತ್ತು ಸಮಾಜದ ಇತರ ವರ್ಗಗಳ ಜನತೆ ಒಟ್ಟಾಗಿ ಹೋರಾಟ ಮಾಡುವುದು ಅಗತ್ಯ ಎಂದು ಪಂಧೆ ಪ್ರತಿಪಾದಿಸಿದರು.

ಭಾರತದ ಸಾಂಸತಿಕ ಪರಂಪರೆಯನ್ನು ವಿರೂಪಗೊಳಿಸುವ ಬಿಜೆಪಿಯ ಪ್ರಯತ್ನಗಳನ್ನು ಐಟಕ್ ನಾಯಕ ಕೆ.ಎಲ್. ಮಹೇಂದ್ರ ಖಂಡಿಸಿದರು.

ಸಿಐಟಿಯು ರಾಜ್ಯ ಅಧ್ಯಕ್ಷ ರಾಕೇಶ್ ಸಿಂಗ್ ಸಮಾವೇಶದ ಗೊತ್ತುವಳಿಯನ್ನು ಮಂಡಿಸಿದರು. ನವೆಂಬರ್ 23 ರಂದು ಶಿಮ್ಲಾದಲ್ಲಿ ರಾಜ್ಯಮಟ್ಟದ ರ್‍ಯಾಲಿ ನಡೆಸಲು ಗೊತ್ತುವಳಿ ಕರೆ ಕೊಟ್ಟಿತು.

ರಾಜಸ್ಥಾನ

ಬಿಜೆಪಿ ನೇತೃತ್ವದ ಸರಕಾರದ ಅಪಾಯಕಾರಿ ಆರ್ಥಿಕ ನೀತಿಗಳ ವಿರುದ್ಧ ಎನ್.ಪಿ.ಎಂ.ಓ ರಾಜಸ್ಥಾನ ಘಟಕ ಅಕ್ಟೋಬರ್ 25 ರಂದು ಜೈಪುರದಲ್ಲಿ ಸಮಾವೇಶವನ್ನು ಸಂಘಟಿಸಿತ್ತು. ಸಾಮೂಹಿಕ ಸಂಘಟನೆಗಳ 500ಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಿಟು ಮತ್ತು ಐಟಕ್ ಪ್ರಧಾನ ಕಾರ್ಯದರ್ಶಿಗಳಾದ ಎಂ.ಕೆ. ಪಂಧೆ ಮತ್ತು ಕೆ.ಎಲ್.ಮಹೇಂದ್ರ ಸಿಐಟಿಯು ಅಖಿಲಭಾರತ ಉಪಾಧ್ಯಕ್ಷ ಸ್ವದೇಶ್ ದೇವೆರಾಯ್ ಐಟಕ್ ಉಪಾಧ್ಯಕ್ಷ ಎಚ್. ಮಹದೇವನ್ ಮುಖ್ಯ ಭಾಷಣಕಾರರಾಗಿದ್ದರು. ಸಾಮೂಹಿಕ ಸಂಘಟನೆಗಳ ರಾಜ್ಯ ನಾಯಕರೂ ಮಾತನಾಡಿದರು.

ಸ್ವದೇಶಿ ಎಂದು ಕೊಚ್ಚಿಕೊಳ್ಳುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅನುಸರಿಸುತ್ತಿರುವ ಐಎಂಎಫ್ ವಿಶ್ವ ಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳಿಂದಾಗಿ ಆಗುವ ಅಪಾಯಗಳ ಬಗ್ಗೆ ಭಾಷಣಕಾರರು ಎಚ್ಚರಿಕೆ ನೀಡಿದರು.

ಪಂಜಾಬ್

ಡಿಸೆಂಬರ್ 11 ರ ಸಾರ್ವತ್ರಿಕ ಮುಷ್ಕರಕ್ಕೆ ಪಂಜಾಬ್ ರಾಜ್ಯವೂ ಸನ್ನದ್ಧಗೊಳ್ಳುತ್ತಿದೆ. ಸಿಪಿಐ(ಎಂ)ನ ಉಪಕ್ರಮದಿಂದಾಗಿ ನವೆಂಬರ್ 14 ರಿಂದ 21 ರವರೆಗೆ ಜಾಥಾಗಳು ನಡೆಯಲಿದ್ದು ನವೆಂಬರ್ 30 ರಂದು ಚಂಡೀಗಢದಲ್ಲಿ ಬೃಹತ್ ರ್‍ಯಾಲಿ ನಡೆಯಲಿದೆ.

ದಿಲ್ಲಿಯಲ್ಲಿ ಅಭ್ಯರ್ಥಿಯ ಕೊಲೆ ಸಿಪಿಐ(ಎಂ) ಖಂಡನೆ

ದಿಲ್ಲಿಯ ವಿಧಾನಸಭಾ ಚುನಾವಣೆಗಳಲ್ಲಿ ಸಮತಾ ಪಕ್ಷದ ಒಬ್ಬ ಅಭ್ಯರ್ಥಿಯ ಕೊಲೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಈ ಅಭ್ಯರ್ಥಿ ಬಿಜೆಪಿ ತ್ಯಜಿಸಿ ಸಮತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದರಿಂದ ರಾಜಕೀಯ ಕಾರಣಕ್ಕಾಗಿ ಆತನ ಕೊಲೆಯಾ ಗಿದೆಯೆಂಬುದು ಸ್ಪಷ್ಟ. ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ಇಂತಹ ಕೊಲೆಗಳು ನಡೆಯುತ್ತವೆ ಎನ್ನುವುದು ಕಾನೂನು ವ್ಯವಸ್ಥೆ ಎಷ್ಟು ಗಂಭೀರವಾಗಿ ಹದಗೆಟ್ಟಿದೆ ಯೆಂಬುದನ್ನು ತೋರಿಸುತ್ತದೆ ಎಂದಿರುವ .ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಿಜೆಪಿ ತನ್ನ ಹೊಣೆ ಜಾರಿಸಿಕೊಳ್ಳಲು ಏನೇ ಹೇಳಿದರೂ ಈ ಕೊಲೆಯ ಹಿಂದೆ ಜನ ಆ ಪಕ್ಷದ ಮಂದಿಯ ಕೈಗಳನ್ನು ಕಾಣುತ್ತಾರೆ ಎಂದಿದೆ. ದಿಲ್ಲಿಯಲ್ಲಿ ಸಂಬಂಧಪಟ್ಟವರು ತಕ್ಷಣ ಈ ಅಪರಾಧಿಗಳನ್ನು ಪತ್ತೆ ಹಚ್ಚಿ ಅವರನ್ನು ರಕ್ಷಿಸಲಾಗುವುದು ಎಂಬ ಜನಗಳ ಶಂಕೆಗಳನ್ನೆಲ್ಲಾ ನಿವಾರಿಸಬೇಕಾದದ್ದು ಅಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಿಸಿದೆ.

ಹರ್‍ಯಾಣದಲ್ಲಿ ಕಾನ್ವೆಂಟ್ ಮೇಲೆ ಹಲ್ಲೆ ಸಿಪಿಐ(ಎಂ) ಖಂಡನೆ

ನವೆಂಬರ್ 9 ರಂದು ಹರ್‍ಯಾಣದ ಜಜ್ಜರ್ ಜಿಲ್ಲೆಯಲ್ಲಿ ದೇಶದ ವಿಭಿನ್ನ ಭಾಗಗಳಲ್ಲಿ ಕ್ರಿಶ್ಚಿಯನ್ ಕೋಮಿನ ಮೇಲೆ ನಡೆಯುತ್ತಿರುವ ಹಲ್ಲೆಗಳ ಇನ್ನೊಂದು ಘಟನೆ ಜರುಗಿತು. ಆರ್.ಎಸ್.ಎಸ್. ಮಂದಿಯ ನೇತೃತ್ವದ ಜನ ಜಂಗುಳಿಯೊಂದು ಕಾನ್ವೆಂಟ್‌ಗೆ ನುಗ್ಗಿ ಲೂಟಿ ಮಾಡಿತು. ಅಲ್ಲಿದ್ದ ಕ್ರೈಸ್ತ ಸನ್ಯಾಸಿನಿಯರನ್ನು ಆ ಹಳ್ಳಿಯನ್ನು ಬಿಡುವಂತೆ ಬೆದರಿಸಿದರು. ರಾಜಧಾನಿಯಿಂದ ಕೇವಲ 55. ಕಿ.ಮಿ. ದೂರದಲ್ಲಿ ಇಂತಹ ಒಂದು ಘಟನೆ ನಡೆಯುತ್ತಿರುವುದು ನಿಜಕ್ಕೂ ನಾಚಿಕೆಗೇಡು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ದೇಶಾದ್ಯಂತ ಕ್ರಿಶ್ಚಿಯನ್ ಕೋಮಿನ ವಿರುದ್ಧ ನಡೆಯುತ್ತಿರುವ ಧಾಳಿಗಳು ಒಂದೇ ಮಾದರಿಯವು ಎಂಬುದನ್ನು ಕಾಣಲು ಕೇಂದ್ರ ಸರ್ಕಾರ ಮತ್ತು ಗೃಹ ಮಂತ್ರಾಲಯ ನಿರಾಕರಿಸುತ್ತಿವೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಘಟನೆಯನ್ನು ಬಲವಾಗಿ ಖಂಡಿಸುತ್ತಾ ಈ ಧಾಳಿಗಳಿಗೆ ಕುಮ್ಮಕ್ಕು ನೀಡುವವರ ವಿರುದ್ಧ ತಕ್ಷಣ ದೃಢ ಕ್ರಮಗಳನ್ನು ಕೈಗೊಳ್ಳಬೇಕು, ಅಲ್ಪಸಂಖ್ಯಾತ ಕೋಮಿನವರು ನಡೆಸುತ್ತಿರುವ ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳಿಗೆ ರಕ್ಷಣೆ ಒದಗಿಸಬೇಕು ಎಂದು ಆಗ್ರಹ ಪಡಿಸಿದೆ.

ತ್ರಿಪುರಾ ಕುರಿತು ಪ್ರಧಾನಿಗಳಿಗೆ ಎಡ ಪಕ್ಷಗಳ ಮುಖಂಡರ ಮನವಿ ಪತ್ರ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ನವೆಂಬರ್ 11 ರಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ತ್ರಿಪುರಾದ ಸನ್ನಿವೇಶವನ್ನು ಚರ್ಚಿಸಿದರು. ಇಬ್ಬರೂ ಮುಖಂಡರು ಒಂದು ಮನವಿ ಪತ್ರವನ್ನು ಸಲ್ಲಿಸಿ ಕೇಂದ್ರ ಸರ್ಕಾರ ರಾಜ್ಯದಲ್ಲಿ ನೆಲೆಗೊಳಿಸಿದ ಸೈನಿಕ ತುಕಡಿಗಳ ಸಂಖ್ಯೆಯನ್ನು ಮೊದಲಿನ ಮಟ್ಟಕ್ಕೆ ಮತ್ತೆ ತರಬೇಕು ಎಂದು ಆಗ್ರಹ ಪಡಿಸಿದರು.ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಬಂದ ಮೇಲೆ. ಮೂರರಲ್ಲಿ ಎರಡು ಬಟಾಲಿಯನ್‌ಗಳನ್ನು ವಾಪಸು ಪಡೆಯಲಾಯಿತು. ಇದನ್ನು ಮತ್ತೆ ಕಳಿಸುವ ಜೊತೆಗೆ ಅರೆಸೈನಿಕ ಪಡೆಗಳ ಬಲವನ್ನು ತಕ್ಷಣವೇ ಹೆಚ್ಚಿಸಬೇಕು ಎಂದು ಅವರು ಆಗ್ರಹ ಪಡಿಸಿದರು.

ಈ ಮೂರರ ಗಡಿ ರಾಜ್ಯದಲ್ಲಿ ಮುಗ್ಧ ಜನಗಳ ಮೇಲೆ ಉಗ್ರಗಾಮಿಗಳ ಧಾಳಿಗಳು ತೀವ್ರವಾಗಿ ಹೆಚ್ಚಿ ಅತ್ಯಂತ ಗಂಭೀರ ಪರಿಸ್ಥಿತಿ ಉಂಟಾಗಿದೆ ಎಂದು ಈ ಇಬ್ಬರೂ ಮುಖಂಡರು ಒತ್ತಿ ಹೇಳಿದರು. ಕೇವಲ ಎರಡೇ ತಿಂಗಳಲ್ಲಿ ಉಗ್ರಗಾಮಿಗಳು 55 ಜನರನ್ನು ಕೊಂದಿದ್ದಾರೆ, 112 ಮಂದಿಯನ್ನು ಅಪಹರಿಸಿದ್ದಾರೆ. ಕಳೆದ ಕೆಲವು ತಿಂಗಳಲ್ಲಿ ಹಲವು ಬಾರಿ ಕೇಂದ್ರದೊಡನೆ ಇದನ್ನು ಎತ್ತಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದೂ ಅವರು ನೆನಪಿಸಿದರು. ಪರಿಸ್ಥಿತಿಯ ಗಂಭಿರತೆಯನ್ನು ಅರಿತು ವೈಯಕ್ತಿಕವಾಗಿ ಮಧ್ಯಪ್ರವೇಶಿಸಿ ತಕ್ಷಣವೇ ಹೆಚ್ಚು ಭದ್ರತಾ ಪಡೆಗಳನ್ನು ಕಳಿಸಬೇಕು ಎಂದು ಅವರು ಪ್ರಧಾನಮಂತ್ರಿ ವಾಜಪೇಯಿಯವರನ್ನು ವಿನಂತಿಸಿ ಕೊಂಡರು.

ಪ್ರಧಾನ ಮಂತ್ರಿಗಳು ಈ ವಿಷಯದಲ್ಲಿ ಅಗತ್ಯವಿದ್ದದ್ದನ್ನೆಲ್ಲಾ ಮಾಡುವುದಾಗಿ ಭರವಸೆ ನೀಡಿದರು ಎಂದು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ ತಿಳಿಸಿದೆ.

ತ್ರಿಪುರಾ ಜನತೆಗೆ ಸೌಹಾರ್ದದ ಮಹಾಪೂರ

ದೇಶದ ಪೂರ್ವಭಾಗದ ಪುಟ್ಟ ಗುಡ್ಡಗಾಡು ರಾಜ್ಯ ತ್ರಿಪುರಾ. ಇಲ್ಲಿ ಆಡಳಿತ ನಡೆಸುತ್ತಿರುವುದು ನಾಲ್ಕನೇ ಬಾರಿಗೆ ಆಯ್ಕೆಯಾಗಿರುವ ಎಡರಂಗ ಸರಕಾರ ಈ ರಾಜ್ಯದಲ್ಲಿನ ಬುಡಕಟ್ಟು ಹಾಗೂ ಬುಡಕಟ್ಟೇತರ ಜನರು ಸೌಹಾರ್ದದಿಂದ ಬಾಳುತ್ತಿದ್ದರೂ ಅವರ ಮಧ್ಯೆ ಒಡಕು ತರಲು ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ಪ್ರಯತ್ನ ನಡೆಸುತ್ತಲೇ ಇವೆ. ಕೊಲೆ,ದೊಂಬಿಯಲ್ಲಿ ತೊಡಗಿವೆ. ತ್ರಿಪುರಾ ಸಂಯುಕ್ತ ವಿಮೋಚನಾ ರಂಗ (ಟಿ.ಯು.ಎಲ್.ಎಫ್) ಮತ್ತು ಅಖಿಲ ತ್ರಿಪುರಾ ಟೈಗರ್ಸ್ ರಂಗ (ಎ.ಟಿ.ಟಿ.ಎಫ್) ದಿಂದ ಈ ಕುಕೃತ್ಯಕ್ಕೆ ನಾಯಕತ್ವ.

ಟಿಎಸ್‌ವಿ, ಟಿಯುಜೆಎಸ್ ಮೊದಲಾದ ಸಂಘಟನೆಗಳೂ ರಾಜ್ಯದಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಇಂಬು ಕೊಡುತ್ತಿವೆ. ಕಾಂಗ್ರೆಸ್ ಪಕ್ಷವೂ ಹಿಂದೆ ಬಿದ್ದಿಲ್ಲ. ಭಾರತೀಯ ಜನತಾಪಕ್ಷವೂ ಇದರಲ್ಲಿ ತುಂಬಾ ಉತ್ಸುಕ. ಇದಕ್ಕೆ ಮುಖ್ಯ ಕಾರಣ. ರಾಜ್ಯ ಆಡಳಿತ ಸೂತ್ರ ಹಿಡಿದಿರು ವುದು ಸಿಪಿಐ(ಎಂ)ನೇತೃತ್ವದ ಎಡರಂಗ.

ಎಡರಂಗ ಸರಕಾರಕ್ಕೆ ಮಸಿ ಬಳಿಯಲು ಯಾವ ದುಷತ್ಯ ನಡೆಸಲೂ ಇವು ಹೇಸುವುದಿಲ್ಲ. ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವಂತೂ ರಾಜ್ಯದ ಉಗ್ರಗಾಮಿ ಚಟುವಟಿಕೆ ಹತ್ತಿಕ್ಕುವ ವಿಚಾರದಲ್ಲಿ ರಾಜ್ಯ ಸರಕಾರಕ್ಕೆ ನೆರವು ನೀಡುವ ಬದಲು ರಾಜ್ಯಕ್ಕೆ ಹೆಚ್ಚು ಭದ್ರತಾ ಪಡೆಗಳನ್ನು ಕಳಿಸದಿರುವ ಮೂಲಕ ಭಯೋತ್ಪಾದಕ ಶಕ್ತಿಗಳಿಗೆ ಪ್ರತ್ಯಕ್ಷ ಬೆಂಬಲ ನೀಡುತ್ತಿದೆ. ಈ ಎಲ್ಲಾವುಗಳಿಂದ ರಾಜ್ಯದ ಪ್ರಗತಿಯೇ ಕುಂಠಿತಗೊಳ್ಳುವ ಅಪಾಯವಿದೆ.

ಹಾಗಾಗದಂತೆ ಮಾಡುವ ಉದ್ದೇಶದಿಂದ ರಾಜ್ಯದ ಎಡರಂಗ ಸರಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದು ಇಡೀ ದೇಶದ ಜನರ ಸಹಕಾರ ಇದಕ್ಕೆ ಬೇಕಾಗಿದೆ. ಎಲ್ಲಾ ಅಡೆತಡೆಗಳ ಮಧ್ಯೆ ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿರುವ ಎಡರಂಗ ಸರಕಾರಕ್ಕೆ ಬೆಂಬಲ ನೀಡುವ ಸಲುವಾಗಿ ತ್ರಿಪುರಾದಿನ ಆಚರಿಸಲು ಸಿಪಿಐ(ಎಂ) 16 ನೇ ಮಹಾಧಿವೇಶನ ಅಂಗೀಕರಿಸಿದ ಗೊತ್ತುವಳಿಯನ್ವಯ ಪಾಲಿಟ್‌ಬ್ಯೂರೊ ಕರೆಗೆ ಅನುಗುಣವಾಗಿ ನವೆಂಬರ್ ಮೂರರಂದು ದೇಶಾದ್ಯಾಂತ ತ್ರಿಪುರಾ ಸೌಹಾರ್ದ ದಿನವನ್ನು ಆಚರಿಸಲಾಯಿತು.

ತಮಿಳುನಾಡಿನಲ್ಲಿ ಬೃಹತ್ ಕಾರ್ಯಾಚರಣೆ

ಸಿಪಿಐ(ಎಂ) ತಮಿಳುನಾಡು ರಾಜ್ಯ ಘಟಕ ನವೆಂಬರ್ 3 ರಂದು ರಾಜ್ಯಾದ್ಯಂತ ತ್ರಿಪುರಾ ದಿನವನ್ನು ಆಚರಿಸಲು ನಿರ್ಧರಿಸಿತ್ತು. ಅದರಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ದೊಡ್ಡ ಸಭೆಗಳು ನಡೆದವು. ಅವುಗಳಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.

ರಾಜ್ಯ ರಾಜಧಾನಿ ಚೆನ್ನೈನಲ್ಲಿ ನಡೆದ ರಾಜಕೀಯ ಮಹತ್ವದ ತ್ರಿಪುರಾದಿನ ಸಮಾವೇಶದಲ್ಲಿ ಡಿ.ಎಂ.ಕೆ. ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಎಂ. ಕರುಣಾನಿಧಿ ಟಿ.ಎಂ.ಸಿ ಅಧ್ಯಕ್ಷ ಜಿ.ಕೆ.ಮೂಪನಾರ್ ಸಿಪಿಐ ರಾಜ್ಯ ಕಾರ್ಯದರ್ಶಿ ಆರ್.ನಲ್ಲಕಣ್ಣು, ಜನತಾದಳ ನಾಯಕ ಜಿ.ಎ.ವಡಿವೇಲು ಪಾಲ್ಗೊಂಡಿದ್ದರು. ದಿನವಿಡೀ ಮಳೆ ಸುರಿಯುತ್ತಿದ್ದರೂ ಸಭೆ ಸ್ಥಳ ಜನರಿಂದ ತುಂಬಿ ತುಳುಕುತ್ತಿತ್ತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಎನ್. ಶಂಕರಯ್ಯ, ತ್ರಿಪುರಾದ ಸಿಪಿಐ(ಎಂ) ಸಂಸತ್‌ಸದಸ್ಯ ಹಾಗೂ ಹಿರಿಯ ಮುಖಂಡ ಖಗೇಸ್‌ದಾಸ್, ರಾಜ್ಯ ಸಮಿತಿ ಸದಸ್ಯೆ ಮೈಥಿಲಿ ಶಿವರಾಮನ್ ಅವರೂ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎ.ಸೌಂದರ್ಯರಾಜನ್ ಅಧ್ಯಕ್ಷತೆ ವಹಿಸಿದ್ದರು.

ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಪಾಕಿಸ್ತಾನದ ಐಎಸ್‌ಐ ಬೆಂಬಲಿತ ಉಗ್ರಗಾಮಿಗಳ ರಾಷ್ಟ್ರಕೃತ್ಯಗಳ ವಿರುದ್ಧ ತ್ರಿಪುರದ ಜನತೆ ನಡೆಸುತ್ತಿರುವ ವೀರ ಹೋರಾಟದ ಬಗ್ಗೆ ಖಗೇಸ್ ದಾಸ್ ವಿವರ ನೀಡಿದರು.

ಪಶ್ಚಿಮ ಬಂಗಾಳದಲ್ಲಿ

ನವೆಂಬರ್ 3 ರಂದು ಕಲ್ಕತ್ತ ಮತ್ತು ಪಶ್ಚಿಮಬಂಗಾಳದ ಜಿಲ್ಲಾ ಕೇಂದ್ರಗಳಲ್ಲಿ ತ್ರಿಪುರಾ ದಿನವನ್ನು ಆಚರಿಸಲಾಯಿತು.

ಕಲ್ಕತ್ತ ವಿವಿಯ ಶತಾಬ್ದಿಹಾಲ್ ನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಸ್‌ದಾಸ್ ಗುಪ್ತಾ ಹೌರಾದಲ್ಲಿ ನಡೆದ ಸಭೆಯಲ್ಲಿ ಗಣಶಕ್ತಿ ಸಂಪಾದಕ ಅನಿಲ್ ಬಿಸ್ವಾಸ್ ಮಾತನಾಡಿದರು. ಉತ್ತರ 24 ಪರಗಣ ಜಿಲ್ಲೆ ಬಾರಾಸತ್‌ನಲ್ಲಿ ಪಕ್ಷದ ನಾಯಕ ಬಿಮನ್ ಬಸು ಮಾತನಾಡಿದರು.

ವಿಶೇಷ ಸಂಚಿಕೆ: ತ್ರಿಪುರಾ ಜನತೆಯ ಚಳವಳಿಯ ಹಿನ್ನೆಲೆ, ಅಭಿವೃದ್ಧಿ ಹಾದಿಯಲ್ಲಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಒಗ್ಗಟ್ಟನ್ನು ಬೆಸೆಯುವಲ್ಲಿ ಸಿಪಿಐ(ಎಂ) ಪಾತ್ರ, ಛಿದ್ರಕಾರಿ ಚಳುವಳಿಯಲ್ಲಿ ಕಾಂಗ್ರೆಸ್ ಪಾತ್ರ ಮೊದಲಾದವುಗಳನ್ನು ವಿವರಿಸುವ ವಿಶೇಷ ಸಂಚಿಕೆಯೊಂದನ್ನು ಗಣಶಕ್ತಿ ಪ್ರಕಟಿಸಿತು.

ಅಸ್ಸಾಂ ಸೌಹಾರ್ದತೆ

ಪಾಲಿಟ್‌ಬ್ಯೂರೋ ಕರೆಗೆ ಸ್ಪಂದಿಸಿದ ಸಿಪಿಐ(ಎಂ)' ಅಸ್ಸಾಂ ರಾಜ್ಯ ಘಟಕ ಸಭೆಗಳನ್ನು ನಡೆಸಿ ಹೋರಾಟ ನಿರತ ತ್ರಿಪುರಾ ಜನತೆಗೆ ಬೆಂಬಲ ವ್ಯಕ್ತಪಡಿಸಿದರು. ರಾಜಧಾನಿ ಗುವಾಟಿಯ ದಿಘಲಿ ತುಬುರಿ ಎಂಬಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹೇಮೇಸ್ ದಾಸ್ ಸಭೆಯೊಂದರಲ್ಲಿ ಮಾತನಾಡಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ತ್ರಿಪುರಾ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಿದರು. ಕಾರ್ಯದರ್ಶಿ ಮಂಡಳಿ ಸದಸ್ಯ ಉದ್ದವ್ ಬರ್ಮನ್ ಅಧ್ಯಕ್ಷತೆ ವಹಿಸಿದ್ದರು.

ಹಿಮಾಚಲ

ಹಿಮಾಚಲ ಪ್ರದೇಶದಲ್ಲಿ ಶಿಮ್ಲಾ ಜಿಲ್ಲಾ ಸಮಿತಿ ನವೆಂಬರ್ 3 ರಂದು ಮೆರವಣಿಗೆಯೊಂದನ್ನು ಏರ್ಪಡಿಸಿತ್ತು. ಅನಂತರ ಸಾರ್ವಜನಿಕ ಸಭೆ ನಡೆಯಿತು.



ಶರತ್ ಚಂದ್ರ

ಮುಜೀಬುರ್ ರಹಮಾನ್ ಕೊಲೆ ಆಪಾದಿತರಿಗೆ ಮರಣ ದಂಡನೆ

ಬಾಂಗ್ಲಾದೇಶದ ಸ್ಥಾಪಕ ನಾಯಕ ಮುಜೀಬುರ್ ರಹಮಾನರ ಕೊಲೆಗೈದ ಪ್ರಕರಣದಲ್ಲಿ ಆರೋಪಿಗಳಾಗಿದ್ದ 19 ಜನ ಮಿಲಿಟರಿ ಅಧಿಕಾರಿಗಳಲ್ಲಿ, 15 ಜನರಿಗೆ ಕೋರ್ಟು ಮರಣದಂಡನೆ ವಿಧಿಸಿದೆ. ದೇಶದ ಸ್ಥಾಪಕ ನಾಯಕರ ಕೊಲೆಗೈದ ಆಪಾದಿತರು ಮುಕ್ತವಾಗಿ ಓಡಾಡಿಕೊಂಡು ಇದ್ದಿದ್ದು, ಆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಘನತೆಗೆ ಕಪ್ಪುಮಸಿ ಬಳಿಯುವಂತಹದು ಆಗಿತ್ತು.

ಮುಜೀಬುರ್ ರಹಮಾನರನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಮೇಲೆ ಅವರ ಕೊಲೆಗಾರರನ್ನು ವಿಚಾರಣೆಗೆ ಗುರಿಪಡಿಸದಿರಲು ತಕ್ಕ ಕಾನೂನುಗಳನ್ನು ರಚಿಸಲಾಗಿತ್ತು. ಈ ಕೊಲೆಗಾರರಿಗೆ ಶಿಕ್ಷೆ ಆಗಲಿಲ್ಲ ಮಾತ್ರವಲ್ಲ, ಅವರಿಗೆ ಪ್ರಮೋಶನ್‌ಗಳು ಸಿಕ್ಕಿ ಕೆಲವರನ್ನು ವಿದೇಶಗಳಿಗೆ ಹೋಗಲು ಬಿಡಲಾಯಿತು. ಕೆಲವರು ರಾಯಭಾರಿಗಳಾದರು. ಕೆಲವರು ವಿದೇಶದಲ್ಲಿದ್ದು ಕೆಲವು ಸಮಯದ ನಂತರ ವಾಪಸು ಬಂದು ರಾಜಕೀಯಕ್ಕೆ ಇಳಿದಿದ್ದರು. ಆದರೆ ಇತ್ತೀಚೆಗೆ ಅಧಿಕಾರಕ್ಕೆ ಬಂದಿದ್ದ ಶೇಖ್ ಹಸಿನಾರವರ ಸರ್ಕಾರ ಈ ಕಾನೂನನ್ನು ತಿದ್ದುಪಡಿ ಮಾಡಿ ಕೊಲೆಗಾರರ ವಿಚಾರಣೆಗೆ ಅನುವು ಮಾಡಿಕೊಟ್ಟಿತು.

ಪ್ರಸ್ತುತ ಪ್ರಧಾನಿ ಶೇಖ್ ಹಸೀನಾ ಮುಜಿಬುರ್ ರಹಮಾನ್ ಪುತ್ರಿ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಮುಜೀಬುರ್ ಜತೆ ಅವರ ಹೆಚ್ಚು ಕಡಿಮೆ ಇಡೀ ಕುಟುಂಬವನ್ನು ಕೊಲ್ಲಲಾಗಿತ್ತು. ಶೇಖ್ ಹಸೀನಾ ಹಾಗೂ ರೆಹಾನಾ ಆಗ ದೇಶದಲ್ಲಿ ಇಲ್ಲವಾದ್ದರಿಂದ ಬದುಕುಳಿದರು.

ಇಂಡೋನೇಶ್ಯಾದಲ್ಲಿ ಪ್ರದರ್ಶನಕಾರರ ಸಾವು, ವಿರೋಧಿನಾಯಕರ ಬಂಧನ

ಇಂಡೋನೇಶ್ಯಾ ಕುದಿಯುತ್ತಿದೆ. ಅಲ್ಲಿನ ಸುಹಾರ್ತೊ ಮಾದರಿ ಪಾರ್ಲಿಮೆಂಟು ಮುಂಬರುವ ರಾಜಕೀಯ ಸುಧಾರಣೆಗಳ ದಿಕ್ಕಿನ ಬಗ್ಗೆ ಚರ್ಚಿಮಾಡುವ ತೀರ್ಮಾನವನ್ನು ಜನ ಮೊದಲೇ ವಿರೋಧಿಸಿದ್ದರು. ಆದರೆ ಅದಕ್ಕಾಗಿ ಅಧ್ಯಕ್ಷ ಹಬೀಬ ಅದಕ್ಕಾಗಿ ಪಾರ್ಲಿಮೆಂಟು ಅಧಿವೇಶನ ಕರೆದಾಗ ಪ್ರತಿಭಟನೆ ಭುಗಿಲೆದ್ದಿತು. ನಾಲ್ಕುದಿನಗಳ ಅಧಿವೇಶನದ ಮೊದಲ ದಿನದಿಂದಲೇ ಪ್ರತಿಭಟನೆ ಆರಂಭವಾಯ್ತು. ಸಾವಿರಾರು ಜನ ಪಾರ್ಲಿಮೆಂಟಿಗೆ ಘೇರಾವೋ ಮಾಡಿದರು, ಒಳಗೆ ನುಗ್ಗಿ ಚರ್ಚೆ ತಡೆಯಲು ಪ್ರಯತ್ನಿಸಿದರು. ಅವರ ಪ್ರತಿಭಟನೆ ಈ ಪಾರ್ಲಿಮೆಂಟು ಈಗಿನ ರಾಜಕೀಯ ವ್ಯವಸ್ಥೆಗೆ ತೇಪೆ ಹಾಕಲು ಮಾತ್ರ ಸಾಧ್ಯ, ಸೈನ್ಯದ ರಾಜಕೀಯ ಪಾತ್ರವನ್ನು ಕೊನೆಗೊಳಿಸುವುದು, ಪಾರ್ಲಿಮೆಂಟಿನಲ್ಲಿ ಒಟ್ಟಾರೆ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯಕ್ಕಿರುವ ನಿಗದಿತ ಸ್ಥಾನ ಕೊನೆಗೊಳಿಸುವುದು, ಅಧ್ಯಕ್ಷ ಸುಹಾರ್ತೊ ಮತ್ತು ಆತನ ಆಪ್ತರ ಬಾಲಬಡುಕರ ಆಸ್ತಿ ಬಗ್ಗೆ ವಿಚಾರಣೆ ಆತನ ಆಡಳಿತ ವೈಖರಿ ಬಗ್ಗೆ ಪೂರ್ಣ ವಿಚಾರಣೆ, ಈಗಿನ ಸರ್ಕಾರಿ-ಕೃಪಾ ಪೋಷಿತ ಮೂರು-ಪಕ್ಷಗಳ ಪದ್ಧತಿ ರದ್ದತಿ ಮಾಡಿ ಎಲ್ಲಾ ರಾಜಕೀಯ ಶಕ್ತಿಗಳಿಗೆ ಚುನಾವಣೆ ಯಲ್ಲಿ ಭಾಗವಹಿಸಲು ಅಧಿಕಾರ, ಪಾರ್ಲಿಮೆಂಟ್ ಚುನಾವಣೆಗೆ ಸ್ಪಷ್ಟ ವೇಳಾಪಟ್ಟಿ, ಆಮೂಲಾಗ್ರ ಚುನಾವಣಾ ಸುಧಾರಣೆ ಇವು ಪ್ರತಿಭಟನಾಕಾರರ ಒತ್ತಾಯಗಳು. ಈಗಿನ ಪಾರ್ಲಿಮೆಂಟು ಮಾಜಿ ಅಧ್ಯಕ್ಷ ಸುಹಾರ್ತೊರ ಬಾಲಬಡುಕರಿಂದ ತುಂಬಿ ಹೋಗಿದೆ. ಅದು ಏನು ಸುಧಾರಣೆ ಮಾಡಲು ಸಾಧ್ಯ ಎಂಬುದೇ ಆಕ್ರೋಶಕ್ಕೆ ಕಾರಣ.

ಅಧ್ಯಕ್ಷ ಸುಹಾರ್ತೊ ರಾಜೀನಾಮೆಯ ನಂತರ ಮೊದಲ ಬಾರಿಗೆ ರಾಜಕೀಯ ಬಿಕ್ಕಟ್ಟು ತೀವ್ರವಾಯಿತು. ಪಾರ್ಲಿಮೆಂಟು ಕಾಯಲು 30 ಸಾವಿರ ಸೈನಿಕರನ್ನು ಬಿಡಲಾಗಿತ್ತು, ಇದು ರಾಜಧಾನಿಯಲ್ಲಿಯ ಪೋಲೀಸರಲ್ಲದೆ. ಮೂರುದಿನ ಸೈನ್ಯ ಮತ್ತು ಪ್ರತಿಭಟನಕಾರರ ನಡುವೆ ಮುಖಾ ಮುಖಿ ನಂತರ ಕೊನೆಯ ದಿನ ಪ್ರತಿಭಟನಾಕಾರರ ಸಹನೆಯ ಕಟ್ಟೆಯೊಡೆಯಿತು. ಸೈನ್ಯ ತನ್ನ ಹಳೆಯ ಚಾಳಿಗೆ ಮರಳಿತು. ಪ್ರತಿಭಟನಾಕಾರರಿಗೆ ಸವಾಲು ಹಾಕಲು ಸರ್ಕಾರ ತನ್ನ ಪರ ಪ್ರತಿಭಟನಾಕಾರರನ್ನು ತಂದಿತು. ನಂತರ ಹಲವು ಕಡೆ ಸರ್ಕಾರಿ-ಪರ, ವಿರೋಧಿ ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆಯಿತು. ಸಹನೆಯ ಕಟ್ಟೊಡೆದ ಪ್ರತಿಭಟನಾಕಾರರು ಪಾರ್ಲಿಮೆಂಟಿಗೆ ನುಗ್ಗಲು ಪ್ರಯತ್ನಿಸಿದಾಗ ಸೈನಿಕರು ಗುಂಡು ಹಾರಿಸಿದರು. ನೀರಿನ ತೋಪುಗಳನ್ನು ಬಳಸಿದರು. 18 ಜನ ಸತ್ತು, ನೂರಾರು ಜನ ತೀವ್ರವಾಗಿ ಗಾಯಗೊಂಡರು. ಸರ್ಕಾರ ಮತ್ತು ಸೈನ್ಯ ಬಲಪ್ರಯೋಗದಿಂದ ಪ್ರತಿಭಟನಾಕಾರರ ಪ್ರಯತ್ನವನ್ನು ವಿಫಲಗೊಳಿಸಿದರೂ ರಾಜಕೀಯ ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡಿದೆ. ಅಧ್ಯಕ್ಷರು ಮತ್ತು ಸೇನಾಮುಖ್ಯಸ್ಥರ ರಾಜೀನಾಮೆಗೆ ಒತ್ತಾಯ ಆರಂಭವಾಗಿದೆ.

ಮಾತ್ರವಲ್ಲ, ಸರ್ಕಾರ ವಿರೋಧಿ ನಾಯಕರನ್ನು ಬಂಧಿಸಿದೆ. ಸುಮಾರು 10 ಪ್ರಮುಖ ನಾಯಕರನ್ನು ಬಂಧಿಸಲಾಗಿದೆ. ಇವರಲ್ಲಿ ಕೆಲವರನ್ನು ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು.

ಬಿಸ್ಮಾ ಬಿನ್‌ಲಾಡೆನ್‌ನ್ನು ಅಮೆರಿಕಕ್ಕೆ ಒಪ್ಪಿಸುವುದಿಲ್ಲ - ತಾಲಿಬಾನ್

ಅಮೆರಿಕದ ಪ್ರಧಾನಿ ಬಿಸ್ಮಾ ಬಿನ್‌ಲಾಡೆನ್ ಆಫ್ರಿಕಾದ ರಾಯಭಾರಿ ಕಟ್ಟಡಗಳ ಮೇಲೆ ಬಾಂಬ್ ಧಾಳಿಯಲ್ಲಿ ಮುಖ್ಯ ಆಪಾದಿತ. ಆತ ಅಫಘಾನಿಸ್ತಾನದಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ಆತನನ್ನು ಕಂಡಕೂಡಲೇ ತನಗೆ ಒಪ್ಪಿಸಬೇಕು ಎಂದು ಅಮೆರಿಕ ಅಫಘಾನಿಸ್ತಾನಕ್ಕೆ ಫರ್ಮಾನು ಹೊರಡಿಸಿತ್ತು. ಆತನ ಮೇಲಿನ ಆಪಾದನೆಗೆ ಪುರಾವೆ ತೋರಿಸಬೇಕು. ಅದಕ್ಕೆ ಗಡುವು ಸಹ ಕೊಡಲಾಗಿತ್ತು. ಈಗ ಆ ಗಡುವು ಮುಗಿದಿದ್ದು, ತಾಲಿಬಾನ್ ತಾನು ಲಾಡೆನ್ ರನ್ನು ಅಮೆರಿಕಕ್ಕೆ ಒಪ್ಪಿಸುವುದಿಲ್ಲ ಎಂದು ಘೋಷಿಸಿದೆ.

ಕೆಂಬೋಡಿಯಾದಲ್ಲಿ ಹನ್‌ಸೇನ್ ಪ್ರಧಾನಿ ರಣರಿದ್ ಮಂತ್ರಿಮಂಡಲದಲ್ಲಿ

ರಾಜ ಸಿಹನೌಕ ಮಧ್ಯಸ್ಥಿಕೆಯಿಂದ ಕೆಂಬೋಡಿಯಾದ ರಾಜಕೀಯ ಬಿಕ್ಕಟ್ಟು ಪರಿಹಾರವಾದಂತಿದೆ. ಇತ್ತೀಚಿನ ಚುನಾವಣೆ ಯಲ್ಲಿ ಎರಡನೇ ಸ್ಥಾನ ಪಡೆದ ಪಕ್ಷದ ನಾಯಕ ಹಾಗೂ ರಾಜಕುಮಾರ ರಣರಿಧ್ ಸರ್ಕಾರದಲ್ಲಿ ಭಾಗವಹಿಸಲು ಒಪ್ಪಿದ್ದಾರೆ. ಹನ್‌ಸೇನ್ ದೇಶದ ಪ್ರಧಾನಿಯಾಗಿರುತ್ತಾರೆ.

ಈ ಚುನಾವಣೆಯ ಮೊದಲು ಹನ್‌ಸೇನ್ ಹಾಗೂ ರಣರಿದ್ದ್ ಇಬ್ಬರೂ ಪ್ರಧಾಮಂತ್ರಿಯಾಗಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು ಅಲ್ಲದೆ ಈ ಬಾರಿ ಹನ್‌ಸೇನ್‌ರ ಕೆಂಬೋಡಿಯನ್ ಪೀಪಲ್ಸ್ ಪಾರ್ಟಿ 122ರಲ್ಲಿ 64 ಸೀಟು ಗಳಿಸಿ ನಿಚ್ಚಳ ಬಹುಮತ ಪಡೆದಿದೆ.

ಐ.ಎಂ.ಎಫ್. ಪ್ರೇರಿತ ನೀತಿ ಬೇಡ, ಕೊರಿಯನ್ ಕಾರ್ಮಿಕರ ಒಕ್ಕೊರಲಿನ ಕೂಗು

ದಕ್ಷಿಣ ಕೊರಿಯದಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾರಿ ಪ್ರದರ್ಶನ ನಡೆಸಿ ಐ.ಎಂ.ಎಫ್. ಪ್ರೇರಿತ ನೀತಿಗಳನ್ನು ಅನುಸರಿಸುವುದರ ವಿರುದ್ಧ ಪ್ರತಿಭಟಿಸಿದರು. ರಾಷ್ಟ್ರೀಯ ಆರ್ಥಿಕವನ್ನು ಹದಗೆಡಿಸಿದ ವ್ಯಕ್ತಿಗಳಿಗೆ ಶಿಕ್ಷೆಯಾಗಬೇಕು, ಲೇ-ಆಫ್‌ಗಳನ್ನು ಅರ್ಧದಷ್ಟು ಕಡಿಮೆ ಮಾಡಬೇಕು - ಇವು ಕಾರ್ಮಿಕರ ಬೇಡಿಕೆಯಾಗಿತ್ತು.

ಇರಾಕ್ ಅಮೇರಿಕ ಹಣಾಹಣಿಗೆ ಮತ್ತೆ ತಡೆ

ಇರಾಕ್ ಅಮೆರಿಕಗಳು ಪುನಃ ಯುದ್ಧದ ಅಂಚಿನಿಂದ ಹಿಂದಕ್ಕೆ ಬಂದಿದೆ. ಇರಾಕ್ ಅಧಿಕೃತವಾಗಿ ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರ ಜತೆ ಸಹಕಾರ ರದ್ದು ಮಾಡಿದ ಮೇಲೆ ಅಮೆರಿಕ ಮಿಲಿಟರಿ ಕಾರ್ಯಾಚರಣೆ ಮಾಡುವುದಾಗಿ ಬೆದರಿಸಿ- ಯುದ್ಧದ ಕಾರ್ಮೋಡಗಳು ಕವಿದಿದ್ದವು. ಅಮೆರಿಕ ಯುದ್ಧ ಹಡಗುಗಳು, ಬಾಂಬರ್ ವಿಮಾನಗಳು ಇತರ ಶಸ್ತ್ರಾಸ್ತ್ರಗಳನ್ನು ಕೊಲ್ಲಿ ಪ್ರದೇಶಕ್ಕೆ ಸಾಗಿಸಿತ್ತು. ಆದರೆ ಕೊನೆಗಳಿಗೆಯಲ್ಲಿ ವಿಶ್ವಸಂಸ್ಥೆ ಮಹಾ ಕಾರ್ಯದರ್ಶಿ ಕೊಫಿ ಅನ್ನನ್ ಕೇಳಿಕೆ ಮೇರೆಗೆ ಇರಾಕ್ ಅಧ್ಯಕ್ಷ ಸದ್ದಾಂ ಹುಸೇನ್ ಪರೀಕ್ಷಕರ ಜತೆ ಸಹಕಾರ ಪುನರಾರಂಭಿಸುವುದಾಗಿ ಹೇಳಿದ್ದಾರೆ. ಆದರೆ ಈ ಬಿಕ್ಕಟ್ಟು ಪುನಃ ಆರಂಭವಾದರೆ ಆಶ್ಚರ್ಯವಿಲ್ಲ. ಶಸ್ತ್ರಾಸ್ತ್ರ ಪರೀಕ್ಷಕರ ಪರೀಕ್ಷಣೆ ಅನಿರ್ದಿಷ್ಟವಾಗಿ ಮುಂದುವರೆಯುತ್ತಿರುವುದು, ಸಾಮೂಹಿಕ ಹತ್ಯೆಯ ಅಸ್ತ್ರಗಳನ್ನು ಕೊನೆಗಾಣಿಸುವುದಕ್ಕೆ ಸದ್ದಾಂ ಹುಸೇನರನ್ನು ಅಧ್ಯಕ್ಷ ಪದವಿಯಿಂದ ಇಳಿಸುವುದರ ಬಗ್ಗೆ ಅಮೆರಿಕದ ತರಾತುರಿ ಇವೆಲ್ಲ ಬಿಕ್ಕಟ್ಟು ಪುನಃ ತರಬಲ್ಲ ಅಂಶಗಳು.

ಬೀಡಿ ಸಿಗಾರ್ ಕಾಯ್ದೆ ಸಣ್ಣ ಬೀಡಿ ಮಾಲಿಕರಿಗೂ ಅನ್ವಯವಾಗಲಿ

ಉಡುಪಿ: ಬೀಡಿ ಎಂಡ್ ಟೊಬೆಕೋ ಲೇಬರ್ ಯೂನಿಯನ್ (ಸಿಐಟಿಯು) ನ ವಾರ್ಷಿಕ ಮಹಾ ಸಭೆಯು ನವೆಂಬರ್ 7 ರಂದು ಎನ್.ಜಿ.ಓ. ಸಭಾ ಭವನದಲ್ಲಿ ನಡೆಯಿತು. ಸಭೆಯಲ್ಲಿ ಬೀಡಿ ಉದ್ಯಮದ ಸ್ಥಿತಿಗತಿಗಳ ಬಗ್ಗೆ ಮತ್ತು ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದು ಬೀಡಿ ಎಂಡ್ ಸಿಗಾರ್ ಕಾನೂನನ್ನು ಎಲ್ಲಾ ಸಣ್ಣ ಮತ್ತು ದೊಡ್ಡ ಬೀಡಿ ಸಂಸ್ಥೆಗಳಿಗೆ ಅನ್ವಯಿಸುವಂತೆ ಸರಕಾರವನ್ನು ಒತ್ತಾಯಿಸುವ ಮತ್ತು ಎಲ್ಲಾ ಬೀಡೀ ಕಾರ್ಮಿಕರಿಗೂ ಲೋಗ್ ಬುಕ್, ವಾರದಲ್ಲಿ 6 ದಿನವೂ 1000 ಬೀಡಿಗೆ ಕಡಿಮೆಯಾಗದಂತೆ ಕೆಲಸ ಕೊಡುವಂತೆ ಮಾಲಿಕರನ್ನು ಒತ್ತಾಯಿಸಿ ನ.20 ರಂದು ನಡೆಯುವ ಹೋರಾಟವನ್ನು ಯಶಸ್ವಿಗೊಳಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಮಾಧವರವರು ಮಾತನಾಡುತ್ತಾ ಈಗಿನ ಬೆಲೆ ಏರಿಕೆಯ ಗಂಭೀರ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಸಿಗುವ ವೇತನ ಜೀವನಾವಶ್ಯಕ ಸಾಮಗ್ರಿಗಳನ್ನು ಕೊಳ್ಳುವುದಕ್ಕೂ ಸಾಕಾಗುವುದಿಲ್ಲ. ಹೀಗಿರುವಾಗ ಗಳಿಕೆಯಲ್ಲಿ ಉಳಿತಾಯ ಮಾಡಲಾಗದ ಕಾರ್ಮಿಕರ ಭವಿಷ್ಯ ಶೋಚನೀಯವಾಗಿದೆ ಎಂದರು.

ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿಯವರು 20 ರಂದು ನಡೆಯುವ ಬೀಡಿ ಕಾರ್ಮಿಕರ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆನೀಡಿದರು. ಉಡುಪಿ ಸಿಪಿಐ(ಎಂ) ಕಾರ್ಯದರ್ಶಿ ಪಿ. ವಿಶ್ವನಾಥ ರೈಯವರು ಮಾತಾಡಿ ಕೇಂದ್ರದ ಬಿಜೆಪಿ ಸರಕಾರದ ಆಡಳಿತದಿಂದಾಗಿ ಬೆಲೆ ಏರಿಕೆ ತೀವ್ರವಾಗಿ ಏರಿಕೆಯಾಗುತ್ತಿದೆ. ಸ್ವದೇಶಿ ಎಂದು ಹೇಳುತ್ತಾ ವಿದೇಶಿಯರಿಗೆ ಗಣಿಗಾರಿಕೆಗೆ ಮತ್ತು ಕೈಗಾರಿಕೆಗೆ ಅನುಮತಿ ಕೊಡುತ್ತಿದ್ದಾರೆ ಎಂದರು. ಮಲೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಯಶೋದಾ, ಕಾಪು ಪ್ರದೇಶ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷೆ ಗೌರಿ ದೇವಾಡಿಗ, ನೆಯ್ಗೆ ಕೆಲಸಗಾರರ ಸಂಘದ ಕಾರ್ಯದರ್ಶಿ ಗುರುರಾಜ ಕೆ. ಶೆಟ್ಟಿಗಾರ್ ಇವರು ಶುಭ ಹಾರೈಸಿದರು.

ಸಭೆಯ ಅಧ್ಯಕ್ಷತೆಯನ್ನು ಗುರುವ ಪೂಜಾರಿ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಸಾಧು ಅಮೀನ್ ಆರಂಭದಲ್ಲಿ ಸ್ವಾಗತಿಸಿ ಸಂಘದ ಕೋಶಾಧಿಕಾರಿ ರಮೇಶ್ ಮೆಂಡನ್ ವಂದನಾರ್ಪಣೆ ಮಾಡಿದರು.

ಬಾಲಕಿ ಮೇಲೆ ಅತ್ಯಾಚಾರ: ಜೆ.ಎಂ.ಎಸ್. ಖಂಡನೆ

ಗುಲ್ಬರ್ಗಾದಲ್ಲಿ 8ನೇ ತರಗತಿಯ ಬಾಲಕಿಯೋರ್ವಳನ್ನು ಅಪಹರಿಸಿಕೊಂಡು ಹೋಗಿ ಲಿಂಗಸೂರಿನಲ್ಲಿ ಅವಳ ಮೇಲೆ ಅತ್ಯಾಚಾರ ನಡೆಸಿ ವಿಡಿಯೋ ಚಿತ್ರಣ ಮಾಡಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸಿದೆ.

ಹುಸುಕಂದಮ್ಮಗಳ ಮೇಲೆ ಬಲಾತ್ಕಾರ ವೆಸಗುವ ಕ್ರೂರಿಗಳನ್ನು ತಕ್ಷಣವೇ ಬಂಧಿಸುವುದಲ್ಲದೆ ಉಗ್ರಶಿಕ್ಷೆಗೆ ಒಳಪಡಿಸಬೇಕೆಂದು ಜನವಾದಿ ಮಹಿಳಾ ಸಂಘಟನೆಯು ಸರ್ಕಾರಕ್ಕೆ ಆಗ್ರಹಿಸಿದೆ. ಇಂತಹ ನಿರ್ಭಯದಿಂದ ನಡೆಯುವ ಪ್ರಕರಣಗಳ ಹಿಂದೆ ಕಾಣದ ಕೈಗಳ ಗುರುತು ಇದ್ದೆ ಇದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ನಿಷ್ಪಕ್ಷಪಾತದಿಂದ ತನಿಖೆಗೆ ಮುಂದಾಗಬೇಕೆಂದು ಜೆ.ಎಂ.ಎಸ್. ರಾಜ್ಯ ಸಮಿತಿ ಒತ್ತಾಯಿಸಿದೆ.

ಈಚೆಗೆ ಹೆಚ್ಚುತ್ತಿರುವ ಬಾಲಕಿಯರ ಮೇಲಿನ ದೌರ್ಜನ್ಯ ಮತ್ತು ಬಲಾತ್ಕಾರಗಳನ್ನು ವಿರೋಧಿಸಿ ಹಾಗೂ ಕಾನೂನು ಕ್ರಮದ ಕತ್ತಿ ಹರಿತ ಮಾಡುವಂತೆ ಒತ್ತಾಯಿಸಿ ಗುಲ್ಬರ್ಗಾ, ಬಳ್ಳಾರಿ, ರಾಯಚೂರು ಜಿಲ್ಲಾ ಕೇಂದ್ರಗಳಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಪ್ರತಿಭಟನಾ ಕಾರ್ಯಕ್ರಮ ನಡೆಸಲಾಗುವುದೆಂದು ತಿಳಿಸಿದೆ.

ಕುಂದಾಪುರದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ

ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನವೆಂಬರ್ 12 ಮತ್ತು13 ರಂದು ಜಾಥಾ ಕಾರ್ಯಕ್ರಮ ನಡೆಯಿತು ಉಡುಪಿ ಜಿಲ್ಲೆಯ 3 ತಾಲೂಕುಗಳಲ್ಲಿ ಪ್ರಚಾರ ಸಭೆಗಳು ನಡೆದವು.

ಕುಂದಾಪುರದಲ್ಲಿ ತಾರೀಕು 13 ರಂದು ಬೃಹತ್ ಮೆರವಣಿಗೆ ನಡೆದು ಗಾಂಧಿ ಮೈದಾನಿನಲ್ಲಿ ಸಂಜೆ ಸಾರ್ವಜನಿಕ ಸಭೆ ಜರುಗಿತು.

ಸಿಐಟಿಯು ವಿನ ಮುಖಂಡರಾದ ಶ್ರೀಯುತ ಮಹಾಬಲ ಒಡೇರಹೋಬಳಿಯವರು ಸ್ವಾಗತಿಸಿ, ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕಾರ್ಯಕ್ರಮಗಳನ್ನು ವಿವರಿಸಿದರು. ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ರೈತ ಸಂಘದ ದ.ಕ ಮತ್ತು ಉಡುಪಿ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಯುತ ಅಬ್ರಹಾಂ ಕರ್ಕಡರವರು ವಹಿಸಿದರು.

ಸಭೆಯನ್ನುದ್ದೇಶಿಸಿ ಜೀವ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಶ್ರೀಯುತ ಎ.ಎಸ್. ಆಚಾರ್ಯರವರು ಮಾತನಾಡಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರಕಾರವು 1991 ರಿಂದಲೂ ನಮ್ಮ ದೇಶದಲ್ಲಿ ಅನುಸರಿಸಿಕೊಂಡು ಬರಲಾಗುತ್ತಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಆರ್ಥಿಕ ನೀತಿಯನ್ನು ಇನ್ನಷ್ಟು ತೀವ್ರವಾಗಿ ಜ್ಯಾರಿಗೊಳಿಸುತ್ತಿರುವುದರಿಂದಾಗಿ ಜನಸಾಮಾನ್ಯರ ಬದುಕು ದುರ್ಬಲಗೊಳ್ಳುತ್ತಿದೆ ಎಂದು ವಿವರಿಸಿದರು. ಬೆಲೆ ಏರಿಕೆಯನ್ನು ನಿಯಂತ್ರಿಸಲಾಗದ ಕೇಂದ್ರ ಸರಕಾರವು ಅಟ್ಟಹಾಸದಿಂದ ಪರಮಾಣು ಬಾಂಬುಗಳನ್ನು ಸಿಡಿಸಿ ವಿಶ್ವದಾದ್ಯಂತ ಟೀಕೆಗೊಳಗಾಗಿದೆಯಲ್ಲದೆ ಕಠಿಣವಾದ ಆರ್ಥಿಕ ದಿಗ್ಬಂಧನೆಗಳನ್ನು ಎದುರಿಸುತ್ತಿದೆ ಎಂದರು.

ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಯವರಾದ ಶ್ರೀಯುತ ಕೆ. ಶಂಕರ್ ಬಿಜೆಪಿ ನೇತ್ರತ್ವದ ಸರಕಾರದ ಆಡಳಿತಾವಧಿಯಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು ಜನಸಾಮಾನ್ಯರು ಕಂಗಾಲಾಗುವಂತಾಗಿದೆ ಎಂದರು. ಡಿಸೆಂಬರ್ 11 ರಂದು ನಡೆಯುವ ಸಾರ್ವತ್ರಿಕ ಮುಷ್ಕರ ಹಾಗೂ ಭಾರತ ಬಂದನ್ನು ಯಶಸ್ವಿಗೊಳಿಸಬೇಕೆಂದು ಎಲ್ಲಾ ವಿಭಾಗದವರನ್ನು ಅವರು ವಿನಂತಿಸಿಕೊಂಡರು.

ಜೀವ ವಿಮಾ ನೌಕರರ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ ರೈಯವರು, ಯುವಜನ ಮುಖಂಡರಾದ ಶ್ರೀ ಚಂದಶೇಖರ ಹಾಗೂ ಪುರಸಭಾ ಅಧ್ಯಕ್ಷರಾದ ಶ್ರೀಯುತ ವಿ. ನರಸಿಂಹನವರು ವಿವಿಧ ರಂಗಗಳಲ್ಲಿ ಕೇಂದ್ರ ಸರಕಾರದ ಆರ್ಥಿಕ ನೀತಿ ಹಾಗೂ ಕೈಗಾರಿಕಾ ನೀತಿಗಳನ್ನು ವಿರೋಧಿಸಿ ಮಾತನಾಡಿದರು.

ಕೊನೆಗೆ. ಸಿಐಟಿಯು ಮುಖಂಡರಾದ ಎಚ್. ವಿಠಲನವರು ವಂದಿಸಿದರು.

ಸುಶೀಲಮ್ಮಳ ಕೊಲೆ ತನಿಖೆಗೆ ಒತ್ತಾಯಿಸಿ ಗ್ರಹಮಂತ್ರಿ ಮನೆ ಮುಂದೆ ಧರಣಿ

ಗುಲ್ಬರ್ಗಾ ಜಿಲ್ಲೆಯ ಯಾದಗಿರಿಯ ಹತ್ತಿಕುಣಿ ಗ್ರಾಮದ ಸುಶೀಲಮ್ಮನ ಕೊಲೆಯು ಅಕ್ಟೋಬರ್ 6 ರಂದು ನಡೆದಿದ್ದು, ಆಕೆಯ ಗಂಡ ಅಣ್ಣ ಮತ್ತು ಅತ್ತಿಗೆ ಜೊತೆಗೂಡಿ ಕೊಲೆ ಮಾಡಿದ್ದಾರೆಂದು ಹೆತ್ತವರು ದೂರು ನೀಡಿದ್ದರು. ಕೇಸು ದಾಖಲು ಮಾಡಿಕೊಳ್ಳದೆ ಹಾಗೂ ಮುಂದಿನ ತನಿಖೆ ನಡೆಸಲು ವಿಳಂಬ ಮಾಡುತ್ತಿರುವ ಪೋಲೀಸ್ ವರ್ತನೆ ವಿರೋಧಿಸಿ ಕೂಡಲೆ ತನಿಖೆಗೆ ಆದೇಶ ನೀಡುವಂತೆ ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತೆಯರು ನವೆಂಬರ್ 17 ರಂದು ಗೃಹ ಸಚಿವ ರೋಷನ್ ಬೇಗ್ ಮನೆ ಮುಂದೆ ಧರಣಿ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಜೆ.ಎಂ.ಎಸ್‌ನ ರಾಜ್ಯ ಕಾರ್ಯದರ್ಶಿ ನೀಲಾ.ಕೆ. ಮಾತನಾಡಿ ಪೋಲೀಸರು ಕೇಸುದಾಖಲು ಮಾಡಲು ನಿರಾಕರಿಸಿದ್ದರು. ಜೆ.ಎಂ.ಎಸ್, ಪ್ರಾಂತ ರೈತ ಸಂಘ ಮತ್ತು ರಾಜ್ಯ ರೈತ ಸಂಘ ಜಂಟಿಯಾಗಿ ಪಾದ ಯಾತ್ರೆ ಮತ್ತು ರಸ್ತಾರೋಕೋ ಚಳುವಳಿ ನಡೆಸಿದ ಮೇಲೆ ಕೇಸು ದಾಖಲು ಮಾಡಿಕೊಂಡರು. ಆರೋಪಿಗಳನ್ನು ಜಾಮೀನು ಮೇಲೆ ಬಿಡುಗಡೆ ಗೊಳಿಸಿ ದೂರು ನೀಡಿದವರನ್ನೆ ಹಿಂಸಿಸುತ್ತಿರುವುದನ್ನು ಖಂಡಿಸಿ ಸೂಕ್ತಕ್ರಮ ಕೈಗೊಳ್ಳುವಂತೆ ಗೃಹ ಮಂತ್ರಿಗಳನ್ನು ಒತ್ತಾಯಿಸಿದರು ಮನವಿ ಸ್ವೀಕರಿಸಿದ ಗೃಹ ಸಚಿವರು ತನಿಖೆಗೆ ಸೂಕ್ತಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ಜೆ.ಎಂ.ಎಸ್. ಪ್ರಾಂತರೈತ ಸಂಘ ರಾಜ್ಯ ರೈತ ಸಂಘ ಹಾಗೂ ಎಸ್.ಎಫ್.ಐ. ವಿದ್ಯಾರ್ಥಿನಿ ಯರ ಉಪಸಮಿತಿ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

"ಕೋಮುವಾದವನ್ನು ಸೋಲಿಸಿ, ಶಿಕ್ಷಣವನ್ನು ಉಳಿಸಿ - ದೇಶವನ್ನುಳಿಸಿ"

ಇದು ನವದೆಹಲಿಯಲ್ಲಿ ನವೆಂಬರ್ 5 ರಂದು ನಡೆದ ಅಖಿಲ ಭಾರತ ವಿದ್ಯಾರ್ಥಿ ಸಮಾವೇಶದಲ್ಲಿ ಮೂಡಿಬಂದ ಘೋಷಣೆ. ಎಸ್.ಎಫ್.ಐ. ಈ ಸಮಾವೇಶವನ್ನು ಏರ್ಪಡಿಸಿತ್ತು. ಇದು ಶಿಕ್ಷಣ ಮಂತ್ರಿಗಳ ಸಮ್ಮೇಳನದ ನಂತರ ರಾಷ್ಟ್ರೀಯ ಮಟ್ಟದಲ್ಲಿ ಕೇಳಿಬಂದ ಭಿನ್ನಾಭಿಪ್ರಾಯದ ಮೊದಲ ದನಿ ಎಂದು ಸಮಾವೇಶದ ರಾಜಕೀಯ ನಿರ್ಣಯವನ್ನು ಮಂಡಿಸುತ್ತಾ ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಬ್ರತಿನ್ ಸೆನ್ ಗುಪ್ತಾ ಹೇಳಿದರು. ಶಿಕ್ಷಣದ ಜಾತ್ಯಾತೀತ ಹಾಗೂ ವೈಜ್ಞಾನಿಕ ಪಠ್ಯ ಕ್ರಮವನ್ನು ಹಾಳುಗೆಡಹುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ದುಷ್ಟ ಪ್ರಯತ್ನಗಳನ್ನು ವಿಫಲಗೊಳಿಸುವುದು ಇದರ ಉದ್ದೇಶವಾಗಿತ್ತು.

ದೇಶಾದ್ಯಂತ ಬಂದ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಡಿಸೆಂಬರ್ 11 ರ ರಾಷ್ಟ್ರವ್ಯಾಪಿ ಮುಷ್ಕರದ ಕರೆಯನ್ನು ಬೆಂಬಲಿಸಲು ನಿರ್ಧರಿಸಿತು. ಈ ಮುಷ್ಕರದ 24 ಬೇಡಿಕೆಗಳಲ್ಲಿ ಒಂದೆಂದರೆ ಸಾರ್ವತ್ರಿಕ ಶಿಕ್ಷಣ, ಶಿಕ್ಷಣದ ಕೋಮುವಾದೀಕರಣ ಮತ್ತು ಖಾಸಗೀಕರಣಕ್ಕೆ ತಡೆ ಹಾಗೂ ಶಿಕ್ಷಣಕ್ಕೆ ಬಜೆಟ್ಟಿನಲ್ಲಿ 10% ಮೀಸಲಿಡಬೇಕು ಎಂಬುದು.

ಡಿಸೆಂಬರ್ 11 ರ ಮುಷ್ಕರವನ್ನು ಯಶಸ್ವಿಗೊಳಿಸಲು ಡಿಸೆಂಬರ್ 1 ರಿಂದ 11 ರವರೆಗೆ ಹಲವು ಪ್ರತಿಭಟನಾ ಕಾರ್ಯಾಚರಣೆಗಳನ್ನು ಸಮಾವೇಶ ರೂಪಿಸಿತು.

- ವಿದ್ಯಾರ್ಥಿಗಳಿಂದ ಒಂದು ಕೋಟಿ ಸಹಿಗಳನ್ನು ಸಂಗ್ರಹಿಸಿ ರಾಷ್ಟ್ರಪತಿಗಳಿಗೆ ಸಲ್ಲಿಸುವುದು.
- ಪಂಜಿನ ಮೆರವಣಿಗೆಗಳು
- ಮಾನವ ಸಂಪನ್ಮೂಲ ಮಂತ್ರಿ ಮುರಳಿ ಮನೋಹರ ಜೋಷಿಯವರ ಪ್ರತಿಕೃತಿ ಹಾಗೂ ಇತ್ತೀಚಿನ ಶಿಕ್ಷಣ ಮಂತ್ರಿಗಳ ಸಭೆಯ ಅಜೆಂಡಾ ಪೇಪರುಗಳ ದಹನ.
- ದೇಶಾದ್ಯಂತ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ರ್‍ಯಾಲಿಗಳು
- ದೇಶಾದ್ಯಂತ ವಿದ್ಯಾರ್ಥಿ ಸಮುದಾಯಗಳ ನಡುವೆ ಚೈತನ್ಯಶಾಲಿ ಜಾಗೃತಿ ಪ್ರಚಾರಾಂದೋಲನ.
- ನವೆಂಬರ್‌ನಲ್ಲಿ ರಾಜ್ಯ ಮಟ್ಟದ ಸಮಾವೇಶಗಳು

ಪ್ರಖ್ಯಾತ ಆರ್ಥಿಕ ತಜ್ಞ ಹಾಗೂ ಅಧ್ಯಾಪಕ ಪ್ರೊ. ಪ್ರಭಾತ್ ಪಟ್ನಾಯಕ್ ಸಮಾವೇಶವನ್ನು ಉದ್ಘಾಟಿಸುತ್ತಾ ಮುಂದಿಟ್ಟ ಸಮಗ್ರ ವಿಶ್ಲೇಷಣೆಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಇಂದು ಬಾಧಿಸುತ್ತಿರುವ ಅವಳಿ ಅಪಾಯಗಳ ಬಗ್ಗೆ ಎಚ್ಚರಿಸಿದರು. ಈಗಾಗಲೇ ಪ್ರಜಾಪ್ರಭುತ್ವವಾದಿ ವಿದ್ಯಾರ್ಥಿ ಸಂಘಟನೆಗಳು ಶಿಕ್ಷಣದ ಖಾಸಗೀಕರಣ ಹಾಗೂ ವ್ಯಾಪಾರೀಕರಣದ ವಿರುದ್ಧ ಹೋರಾಡುತ್ತಿವೆ, ಈಗ ಇದರೊಂದಿಗೆ ಹೊಸದೊಂದು ಅಪಾಯ ಎದುರಾಗಿದೆ. ಅದೆಂದರೆ ದೇಶದ ಜಾತ್ಯಾತೀತ ಹಂದರವನ್ನು ಧ್ವಂಸ ಮಾಡುವ ಬಿಜೆಪಿ ನೇತೃತ್ವದ ಸರ್ಕಾರದ ಪ್ರಯತ್ನಗಳು ಎಂದರು.

ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಹಿಂದೆ ಎಸ್‌ಎಫ್‌ಐ ಮುಖಂಡರಾಗಿದ್ದು ಈಗ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾಗಿರುವ ಸೀತಾರಾಂ ಯೆಚೂರಿಯವರೂ ಎಸ್‌ಎಫ್‌ಐ ಮುಂದಿರುವ ಈ ಪ್ರಶ್ನೆಗಳ ಬಗ್ಗೆ ಒತ್ತಿಹೇಳಿದರು. ಈಗ ಬಹುಮುಖೀ ಶತ್ರುವನ್ನು ವಿದ್ಯಾರ್ಥಿಗಳು ಎದುರಿಸ ಬೇಕಾಗಿದೆ ಎಂದ ಯೆಚೂರಿಯವರು ಶಿಕ್ಷಣದ ಕೋಮುವಾದೀಕರಣ ದೇಶದಲ್ಲಿ ಬ್ರಾಹ್ಮಣ್ಯ ಹಾಗೂ ದಬ್ಬಾಳಿಕೆಯ ವ್ಯವಸ್ಥೆಯನ್ನು ಹೇರುವ ಪ್ರಯತ್ನ ಎಂದು ಒತ್ತಿ ಹೇಳಿದರು. ಶಿಕ್ಷಣದ ಮೇಲಿನ ಈ ಹೊಚ್ಚ ಹೊಸ ಆಕ್ರಮಣವನ್ನು ಸೈದ್ಧಾಂತಿಕವಾಗಿ ಎದುರಿಸಬೇಕು, ಏಕೆಂದರೆ ಬಿಜೆಪಿ ಮತ್ತವರ ಮಿತ್ರರು ಶೋಷಣೆಯ ಮೇಲೆ ನಿಂತ ಒಂದು ವ್ಯವಸ್ಥೆಯನ್ನು ಸ್ಥಾಪಿಸಬಯಸುತ್ತಿದ್ದಾರೆ ಎಂದವರು ಹೇಳಿದರು.

ಭಾರತವನ್ನು ಮಣಿಸಲು ಕ್ಲಿಂಟನ್ ಆಡಳಿತದ ವೈಷಮ್ಯಪೂರ್ಣ ಕ್ರಮ ಒತ್ತಡ ಎದುರಿಸುವಲ್ಲಿ ವಾಜಪೇಯಿ ಸರ್ಕಾರದ ವಿಫಲತೆ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಆಡಳಿತ ಸುಮಾರು ಇನ್ನೂರು ಭಾರತೀಯ ಸಂಸ್ಥೆಗಳು ಮತ್ತು ಕಂಪನಿಗಳನ್ನು ವ್ಯಾಪಾರ ಮತ್ತು ಇತರ ಸಂಬಂಧಿತ ಚಟುವಟಿಕೆಗಳ ನಿರ್ಬಂಧಿತ ಪಟ್ಟಿಯಲ್ಲಿ ಸೇರಿಸಿದೆ. ಈ 'ಎಂಟಿಟೀಸ್ ಲಿಸ್ಟ್' ನಲ್ಲಿ ಹಲವು ರಕ್ಷಣಾ ಮತ್ತು ಸಂಶೋಧನಾ ಸಂಸ್ಥೆಗಳಿವೆ, ಸಾರ್ವಜನಿಕ ವಲಯ ಹಾಗೂ ಖಾಸಗೀ ವಲಯದ ಕಂಪನಿಗಳಿವೆ. ಈ ಹೆಜ್ಜೆಯ ಮೂಲಕ ಕ್ಲಿಂಟನ್ ಆಡಳಿತ ಭಾರತ ತನ್ನ ಆದೇಶಗಳಿಗೆ ತಲೆಬಾಗುವಂತೆ ಮಾಡಲು ಇನ್ನೊಂದು ವೈಷಮ್ಯಪೂರ್ಣ ಕ್ರಮ ಕೈಗೊಂಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆಯೊಂದರಲ್ಲಿ ಖಂಡಿಸಿದೆ.

ವಾಜಪೇಯಿ ಸರಕಾರ ಪರಮಾಣು ಪರೀಕ್ಷಣೆಗಳನ್ನು ನಡೆಸಲು ತನ್ನ ವಿಪತ್ಕಾರಿ ನಿರ್ಣಯದ ಹಿನ್ನೆಲೆಯಲ್ಲಿ ಅಮೆರಿಕಾ ನಿರಂತರವಾಗಿ ಹಾಕುತ್ತಿರುವ ಒತ್ತಡಗಳನ್ನು ಎದುರಿಸಿ ನಿಲ್ಲುವಲ್ಲಿ ಪ್ರದರ್ಶಿಸುತ್ತಿರುವ ದೌರ್ಬಲ್ಯ ಎದ್ದು ಕಾಣುತ್ತಿದೆ ಎಂದೂ ಸಿಪಿಐ(ಎಂ) ಟೀಕಿಸಿದೆ. ವಾಜಪೇಯಿ ಸರಕಾರ ಗುಟ್ಟಿನ ಮಾತುಕತೆಗಳನ್ನು ನಡೆಸುತ್ತಾ ಹಠಮಾರಿ ಅಮೆರಿಕನ್ ಸರಕಾರವನ್ನು ಕೆಲವು ರಿಯಾಯ್ತಿಗಳಿಗಾಗಿ ಯಾಚಿಸುತ್ತಿರುವ ಶೋಚನೀಯ ದೃಶ್ಯ ಭಾರತದ ಪ್ರತಿಷ್ಠೆಗೆ ಬಹಳ ಕುಂದು ತಂದಿದೆ. ಭಾರತದ ಸಾರ್ವಭೌಮ ಹಕ್ಕುಗಳ ಮೇಲಿನ ಇತ್ತೀಚಿನ ಈ ಬೆದರಿಕೆಗೆ ಸರ್ಕಾರ ದೃಢವಾಗಿ ಪ್ರತ್ಯುತ್ತರ ನೀಡಬೇಕು-ಸ್ವತಂತ್ರ ನಿರ್ಣಯ ಕೈಗೊಳ್ಳುವ ಭಾರತದ ಹಕ್ಕಿನ ಬಗ್ಗೆ ಯಾವುದೇ ರಾಜಿಗಳಿಯಲು ಸಾಧ್ಯವಿಲ್ಲ ಎಂದು ಸಿಪಿಐ (ಎಂ) ಪೊಲಿಟ್ ಬ್ಯೂರೋ ಎಚ್ಚರಿಸಿದೆ.

ಟೆಲಿಕಾಂ ನೌಕರರ ಯಶಸ್ವಿ ಮುಷ್ಕರ

ದೂರಸಂಪರ್ಕ ಇಲಾಖೆಯನ್ನು ಕಾರ್ಪೊರೇಶನ್ ಆಗಿ ಪರಿವರ್ತನೆ ಮಾಡುವ ಸರಕಾರದ ತೀರ್ಮಾನದ ವಿರುದ್ಧ ಐದು ಕಾರ್ಮಿಕ ಸಂಘಟನೆಗಳ ನೇತ್ರತ್ವದಲ್ಲಿ ನಡೆದ ಟೆಲಿಕಾಂ ಮುಷ್ಕರ ದೇಶವ್ಯಾಪಿಯಾಗಿ ಯಶಸ್ವಿಯಾಗಿ ನಡೆದಿದೆ.

ಎರಡುವರೆ ಲಕ್ಷ ಟೆಲಿಕಾಂ ನೌಕರರು ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಕೇರಳ, ಬಂಗಾಳ, ಹರಿಯಾಣ, ಅಸ್ಸಾಂ ಈಶಾನ್ಯ ರಾಜ್ಯಗಳು, ಹಿಮಾಚಲ ಪ್ರದೇಶ, ಚೆನ್ನೈ ಟೆಲಿಫೋನ್, ಕಲ್ಕತ್ತ ಟೆಲಿಫೋನ್ಸ್, ಅಂಡಮಾನ್, ನಿಕೋಬಾರ್ ದ್ವೀಪಗಳು ಈ ಪ್ರದೇಶಗಳಲ್ಲಿ ಸಂಪೂರ್ಣ ಮುಷ್ಕರ ನಡೆದಿದೆ.

ತಮಿಳುನಾಡು, ಆಂದ್ರ ಪ್ರದೇಶ, ಗುಜರಾತ್, ಮಧ್ಯಪ್ರದೇಶ, ಕರ್ನಾಟಕ ಈ ರಾಜ್ಯಗಳಲ್ಲಿ ಶೇಕಡಾ 70 ರಷ್ಟು ಮುಷ್ಕರ ನಡೆದಿದೆ. ಪಂಜಾಬ್, ಮಹಾರಾಷ್ಟ್ರ, ಬಿಹಾರ್ ಒರಿಸ್ಸಾ ಈ ರಾಜ್ಯಗಳಲ್ಲಿಯೂ ದೂರಸಂಪರ್ಕ ಇಲಾಖೆಯಲ್ಲಿ ಮುಷ್ಕರ ನಡೆಯಿತು. ಮಹಾನಗರ ನಿಗಮ (ಎಂ.ಟಿ.ಎನ್.ಎಲ್) ದಲ್ಲಿ ಬೊಂಬಾಯಿ ಮತ್ತು ದಿಲ್ಲಿಯ ಸಾವಿರಾರು ನೌಕರರು ಭಾಗಿಯಾಗಿದ್ದಾರೆ. ಬಿ.ಎಂ.ಎಸ್. ಮತ್ತು ಎಫ್. ಎಂಡ್ ಟಿ.ಓ. ಈ ಸಂಘಟನೆಯ ಸದಸ್ಯರು ಕೂಡಾ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಐದನೇ ವೇತನ ಆಯೋಗದಲ್ಲಿ ಇರುವ ತಪ್ಪು ಸಿಫಾರಸ್ಸುಗಳನ್ನು ಸರಿಪಡಿಸಲಿಕ್ಕೆ ಮತ್ತು ಟೆಲಿಕಾಂ ಇಲಾಖೆಯನ್ನು ಕಾರ್ಪೋರೇಷನ್ ಆಗಿ ಮಾಡಬಾರದು, ನೌಕರರಿಗೆ ಮೂರು ಸಮಯಬದ್ಧ ಪ್ರಮೋಷನ್ ಸಿಗಲೇಬೇಕು, ಹಾಗೂ ಕ್ಯಾಜುವಲ್, ಪಾರ್ಟ್ ಟೈಂ ಇವರನ್ನು ಖಾಯಂಗೊಳಿಸಬೇಕು ಎಂಬ ಬೇಡಿಕೆಗಳುಳ್ಳ ಮುಷ್ಕರ ದೇಶವ್ಯಾಪಿಯಾಗಿ ಯಶಸ್ವಿಯಾಗಿ ನಡೆದಿದೆ.

ಕಾಮ್ರೇಡ್ ವಿ.ಎ.ಎನ್. ನಂಬೂದರಿ ಪಿ.ಎಸ್. ರಾಮನ್ ಕುಟ್ಟಿ ಪವಿತ್ರ ಚಕ್ರವರ್ತಿ ವಿ.ಆರ್. ಚಂದ್ರಶೇಖರನ್ ಈ ಮುಷ್ಕರದಲ್ಲಿ ಭಾಗಿಯಾದ ಎಲ್ಲಾ ನೌಕರರನ್ನೂ ಅಭಿನಂದಿಸಿದ್ದಾರೆ.

ಕೈಗೆ ಕರಟವ ಕೊಟ್ಟರೋ

ಕೇಳಿ ಹೇಳುವೆ ದೇಶಭಕ್ತರೆ
ಕಾಳ ಮೆದುಳಿನ ಆಳುವಾತರು
ಹಾಳುಗೆಡವಿದ ವ್ಯಥೆಯ ಕತೆಯನು
ತಾಳ್ಮೆಯಿಂದಲಿ ಕೇಳಿರೋ

ಕೋಮು ಕೋಮಿನ ನಡುವೆ ದ್ವೇಷದ
ಧೂಮವೆಬ್ಬಿಸಿ ಸ್ವಾರ್ಥಕೆ
ನಮ್ಮ ದೇಶದಿ ನಂಬಿ ನಡೆದಿಹ
ಸಾಮ್ಯ ನೀತಿಯ ಕೊಂದರೋ

ರೊಟ್ಟಿ ಕಾಣದ ಹಸಿದ ಹೊಟ್ಟೆಗೆ
ತೆತ್ತುಸಾವಿರ ಕೋಟಿ ಹಣಗಳ
ಸುಟ್ಟು ದೇಶವ ಕುಟ್ಟಿ ಕೆಡಹುವ
ಕೆಟ್ಟ ಬಾಂಬನು ಇಟ್ಟರೋ

ವಿಶ್ವ ಬ್ಯಾಂಕಿನ ಕುಹಕ ನೀತಿ
ಮೋಸಬಲೆಯೊಳು ಬೀಳುತ
ದಾಸರಾಗುತ ತಲೆಯ ಬಾಗುತ
ದೇಶ ಹರಾಜಿಗಿಟ್ಟರೋ

ಯುಕ್ತಾ ಯುಕ್ತಾ ಪರಿವೆ ಇಲ್ಲದೆ
ಸೂಕ್ತ ಸಲಹೆಯ ಕೇಳದೆ
ಶಕ್ತ ರಾಷ್ಟ್ರದ ವಣಿಕ ಕುಹಕಗೆ
ಮುಕ್ತ ದ್ವಾರವು ಎಂದರೋ

ಕೋಟಿ ಕೋಟಿ ರೈತ ಜನರಿಗೆ
ತಾಟು ಕೊಡಿಸಲು ಭಿಕ್ಷೆಗೆ
ಗ್ಯಾಟು-ಡೆಂಕಲ್ ಎಂಬ ಮಾರಿಗೆ
ಗೇಟು ತೆರೆದೊಳ ಬಿಟ್ಟರೋ

ದೋಷಪೂರಿತ ಅರ್ಥನೀತಿಗೆ
ಶಾಸನಾತ್ಮಕ ರೂಪು ನೀಡುತ
ದೇಶ ಕೋಶ ಬರಿದು ಮಾಡಿ
ದಾಸರಾಗಲು ಹೊರಟರೋ

ಒಡನೆ ಬೆಲೆಗಳ ಗಗನ ಕೇರಿಸಿ
ದುಡಿವ ನಮ್ಮೀ ಕೂಲಿಕಾರರ
ಬಡವ ಮಧ್ಯಮ ವರ್ಗಕೆಲ್ಲಾ
ಒಡೆದ ಕರೆಟವ ಕೊಟ್ಟರೋ

ಅಂದು ಬಂದರು ವಣಿಕವೇಷದಿ
ಕೊಂಡು ಆಳುತ ಖಂಡ ಭಾರತ
ತುಂಡು ಮಾಡುತ ಕೊಳ್ಳೆಹೊಡೆಯುತ
ಕೊಂಡು ಹೋದರೋ ಸಂಪದ

ಇತ್ತ ಕೇಳಿರೋ ಶಕ್ತ ಯುವಕರೆ
ಸುತ್ತು ವರಿಯುತ ನಮ್ಮದೇಶವ
ಮತ್ತೆ ಬರುತಿಹರದೇ ಬಿಳಿಯರು
ಕೆತ್ತ ಲೋಸುಗ ಬೋಳನು

ನಾಳೆ ಬರಲಿಹ ಕೇಡನೀಗಿಸೆ
ವಳಿರೆಲ್ಲರು ಮೈಯ ಕೊಡವುತ
ಆಳುವಾತರ ಕಿವಿಗಳಿದುರಲಿ
ಕಹಳೆಯೂದುವ ಬನ್ನಿರೋ

\- ವಿಡಂಬಾರಿ

ಎಚ್ಚರಿಕೆಯ ಗಂಟೆ ....

ಪುಟ 1 ರಿಂದ

ಮುಚ್ಚಳಿಕೆ ಬರೆದು ಕೊಟ್ಟವರಿಂದ ಕಮ್ಯುನಿಸ್ಟರಿಗೆ ದೇಶ ಪ್ರೇಮದ ಸರ್ಟಿಫಿಕೇಟ್ ಬೇಕಿಲ್ಲ ಎಂದ ಶ್ರೀರಾಮರೆಡ್ಡಿಯವರು ದೇಶಪ್ರೇಮವೆಂದರೆ ನಮ್ಮ ಮಟ್ಟಿಗೆ ದೇಶದ ಕೋಟ್ಯಾಂತರ ದುಡಿಯುವ ಜನಗಳ ಹಿತಾಸಕ್ತಿ ಕಾಪಾಡಲು ಶ್ರಮಿಸುವುದು ಎಂದರ್ಥ ಎಂದರು. ಮಾನವೀಯತೆ, ದೇಶದ ಐಕ್ಯತೆಯ ಬಗ್ಗೆ ಕಾಳಜಿಯೇ ಇಲ್ಲದ ಈ ಮಂದಿಯನ್ನು ಅಧಿಕಾರದಿಂದ ಕೆಳಗಿಳಿಸಬೇಕಾದ ಪರಿಸ್ಥಿತಿ ಬಂದಿದೆ ಎಂದರು.

ಸುಲಿಗೆಕೋರರಿಗಷ್ಟೇ ಉತ್ತಮ ಜೀವನ

ನಮ್ಮ ಮಾಜಿ ಮುಖ್ಯಮಂತ್ರಿ ಈಗಿನ ಕೇಂದ್ರ ವಾಣಿಜ್ಯ ಮಂತ್ರಿ ಹೆಗ್ಡೆಯವರ ಆಮದು-ರಫ್ತು ನೀತಿ ರೈತರ ಜೀವನವನ್ನು ಇನ್ನಷ್ಟು ಕಠಿಣವಾಗಿಸಿದೆ ಎಂದರು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನಪಡೆಯವರು. ಎಣ್ಣೆ ವ್ಯಾಪಾರಿಗಳ ಹಿತಕ್ಕಾಗಿ ಎಣ್ಣೆ ಆಮದು ಮಾಡಲು ಅವಕಾಶ ಕೊಟ್ಟರು, ನಂತರ ಶೇಂಗಾ ಬೆಲೆ ಕುಸಿಯುವಂತಾಯಿತು, ಸಿರಾದಲ್ಲಿ ರೈತರು ಪೋಲಿಸರ ಗುಂಡಿಗೆ ಬಲಿಯಾದರು. ಉದಾರೀಕರಣದ ನೀತಿಗಳಿಂದಾಗಿ ಸುಮಾರು 2000 ರೈತರು ಸಾವಿಗೀಡಾಗಿದ್ದಾರೆ, ಅತ್ತ ಸುಲಿಗೆಕೋರರಿಗೆ ಮಾತ್ರ ಈ ಉದಾರೀಕರಣ ಉತ್ತಮ ಜೀವನ ಕೊಟ್ಟಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು. ರೈತರು ಇಂತಹ ನೀತಿಗಳನ್ನು ಬದಲಿಸಲು ಹೋರಾಡುತ್ತಿದ್ದಾರೆ ಎಂದರು ಅವರು.

ಮಹಿಳಾ-ವಿರೋಧಿ ಸರ್ಕಾರ

ಬಿಜೆಪಿ ಮಹಿಳಾ-ವಿರೋಧಿ ಸರಕಾರ ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿದೆ ಎಂದರು ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ನೀಲಾರವರು. ಎಲ್ಲಿ ನೋಡಿದರೂ ಎಚ್ಚರಿಕೆಯ, ಹೋರಾಟದ, ಪ್ರತಿಭಟನೆಯ ಗಂಟೆ ಮೊಳಗಿದೆ. ಹೆಜ್ಜೆ ಹೆಜ್ಜೆಗೂ ಸ್ವಾತಂತ್ರ್ಯದ ಬೆಳಕಿನತ್ತ ಹೋರಾಟ ನಡೆದಿದೆಯೆಂದ ಅವರು ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನ್ಯಾಯಪೂರ್ಣ ಬೇಡಿಕೆಗಳ ಬಗ್ಗೆ ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿದರು. ಮಹಿಳೆಯರು ಕೇವಲ ಕುಡಿಯುವ ನೀರಿಗಾಗಿ ಐದಾರು ಕಿಲೋ ಮೀಟರ್ ನಡೆಯಬೇಕಾಗಿರುವ, ಶೌಚಾಲಯದ ವ್ಯವಸ್ಥೆಯಿಲ್ಲದೆ ಪರದಾಡುವ ಪರಿಸ್ಥಿತಿಯಿರುವಾಗ ವಿ.ಹೆಚ್.ಪಿ.ಯ ಮಾತೃಮಂಡಳಿ ಶ್ಲೋಕ ಉಚ್ಚರಣೆ, ಹಬ್ಬ-ಹರಿದಿನಗಳ ವಿಧಿವತ್ ಆಚರಣೆ ಇತ್ಯಾದಿ ಬಗೆ ಅಧ್ಯಯನ ಶಿಬಿರ ನಡೆಸುವ ಹಾಸ್ಯಾಸ್ಪದ ಕ್ರಮದತ್ತ ಗಮನ ಸೆಳೆದ ನೀಲಾರವರು ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮಹಿಳೆಯರ ಮೇಲಿನ ದೌರ್ಜನ್ಯಗಳು ದ್ವಿಗುಣಗೊಂಡಿವೆ, ಬೆಲೆಗಳಂತೂ ಹಲವು ಪಟ್ಟು ಹೆಚ್ಚಿವೆ, ಮಹಿಳಾ-ಮೀಸಲಾತಿ ಕೇವಲ ಪೇಪರಿನಲ್ಲಿ ಉಳಿದಿದೆ ಎಂದರು.

ಮುಖವಾಡದ ಮುಖವಾಡ ಕೀಳಲು ಬಂದಿದ್ದೇವೆ

1 ಕೋಟಿ ಉದ್ಯೋಗವಾಕಾಶ ನಿರ್ಮಿಸುವ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದವರು ಇರುವ ಉದ್ಯೋಗಾವಕಾಶಗಳನ್ನೇ ನಾಶ ಮಾಡಿದ್ದಾರೆ. ನಿವೃತ್ತಿ ವಯಸ್ಸನ್ನು 58 ರಿಂದ 60 ಕ್ಕೇರಿಸಿ ಏಳೂವರೆ ಲಕ್ಷ ಉದ್ಯೋಗವಕಾಶಗಳನ್ನು ಯುವಜನರಿಗೆ ವಂಚಿಸಿದವರು ಇವರು ಎಂದರು ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಎಸ್.ವೈ.ಗುರುಶಾಂತ್. ಎಣ್ಣೆ ಮಾಲಕರಿಂದ ಚುನಾವಣೆಗೆ 350 ಕೋಟಿ ರೂ. ಪಡೆದವರು ಎಣ್ಣೆ ಬೆಲೆ ಇಳಿಸಲಾಗದೆ ಹೋದರೆ ಆಶ್ಚರ್ಯವೇನು ಎಂದು ಪ್ರಶ್ನಿಸಿದ ಗುರುಶಾಂತ್ ಪ್ರಧಾನಮಂತ್ರಿಗಳಿಗಂತೂ ಬೆಲೆಯೇರಿಕೆ ಕಾಣುತ್ತಲೇ ಇಲ್ಲ ಎಂದರು. ವಾಜಪೇಯಿಯವರು ಆರ್.ಎಸ್.ಎಸ್.ನ ಮುಖವಾಡ ಎಂದು ಹಿಂದೆ ಹೇಳಿದ್ದರು. ಈಗ ಈ ಮುಖವಾಡಕ್ಕೇ 'ತೆಗಿಯೋ ನಿನ್ನ ಮುಸುಗ' ಎನ್ನಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ಕಿತ್ತೆಸೆಯಲು ಬಂದಿದ್ದೇವೆ, ಇದಕ್ಕಾಗಿ ಡಿಸೆಂಬರ್ 11 ರ ಮುಷ್ಕರ, ಹರತಾಳವನ್ನು ಯಶಸ್ವಿಗೊಳಿಸುವ ಪ್ರತಿಜ್ಞೆ ಮಾಡಿದ್ದೇವೆ ಎಂದು ಡಿವೈಎಫ್‌ಐ ಮುಖಂಡರು ಹೇಳಿದರು.

ಎಸ್.ಎಫ್.ಐ. ನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್‌ರವರು ಶಿಕ್ಷಣ ರಂಗದಲ್ಲಿ ಉದಾರೀಕರಣ, ಖಾಸಗೀಕರಣ ಹಬ್ಬಿಸಿರುವ ಪಿಡುಗುಗಳ ಬಗ್ಗೆ ಹೇಳುತ್ತಾ ಬಿಜೆಪಿ ನೇತೃತ್ವದ ಸರಕಾರ ಇದರ ಜೊತೆಗೇ ಶಿಕ್ಷಣವನ್ನು ಕೋಮುವಾದೀಕರಣಗೊಳಿಸಲು ಆರಂಭಿಸಿರುವುದನ್ನು ಬಲವಾಗಿ ಖಂಡಿಸಿದರು. ಉನ್ನತ ಶಿಕ್ಷಣಕ್ಕೆ ನೀಡಿರುವ ಹಣದಲ್ಲಿ 25% ಕಡಿತ ತಂದು ಕೇವಲ 6% ಮಂದಿಗಷ್ಟೇ ತಲುಪಿರುವ ಉನ್ನತ ಶಿಕ್ಷಣವನ್ನು ಇನ್ನಷ್ಟು ಸೀಮಿತಗೊಳಿಸಲಾಗುತ್ತಿದೆ. 10 ಕೋಟಿ ರೂ. ಬಂಡವಾಳ ಕೊಡಬಲ್ಲವನಿಗೆ ಒಂದು ವಿಶ್ವವಿದ್ಯಾಲಯ ಎಂದು ಶಿಕ್ಷಣದ ವ್ಯಾಪಾರಿಕರಣವನ್ನು ತೀವ್ರಗೊಳಿಸಿದ್ದಾರೆ ಈ ಸರಸ್ವತಿ ವಂದನೆಯ ಬಗ್ಗೆ ಮಾತಾಡುವವರು ಎಂದು ಪ್ರಕಾಶ್ ಟೀಕಿಸಿದರು. ಇಂತಹ ನೀತಿಗಳ ಬದಲಾವಣೆಯ ಹೋರಾಟದಲ್ಲಿ ತೊಡಗಿರುವ ವಿದ್ಯಾರ್ಥಿಗಳು ಡಿಸೆಂಬರ್ 11 ರ ಮುಷ್ಕರವನ್ನು ಯಶಸ್ವಿಗೊಳಿಸುವರೆಂದು ಅವರು ಹೇಳಿದರು.

ವಾರದ ವ್ಯಂಗ್ಯಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರ

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ